

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 270 | Saturday 16-03-2024 | E-mail : maruti.b.hosamani76@gmail.com | Page: 4 | Price : Rs. 1/-


## ಹುನಗುಂದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಕುಡಿಯುವ ನೀರಿಗೆ ಬರ...?

## ತಲೆ ಕೆಡಿಸಿಕೊಳ್ಳದ ತಹಶೀಲ್ದಾರ್...!: ಮಲ್ಲಿಕಾರ್ಜುನ ಬಂಡರಗಲ್ಲ



**ಹುನಗುಂದ :** ತಾಲೂಕಿನ ಆಡಳಿತದ ಪ್ರಮುಖ ಶಕ್ತಿ ಕೇಂದ್ರವಾದ ತಹಶೀಲ್ದಾರ ಕಾರ್ಯಾಲಯದ ಆವರಣದ ದಶ ದಿಕ್ಕುಗಳನ್ನು ಹುಡಿಕಿದರೂ ಕೂಡಾ ಒಂದು ಹನಿ ನೀರಿನ ಮೂಲ ಸಿಗದು, ಕಳೆದ ಆರು ವರ್ಷಗಳಿಂದ ಕುಡಿಯುವ ನೀರಿನ ಸೌಕರ್ಯವಿಲ್ಲದೇ ಬೇಸಿಗೆಯ ಬಿಸಿಲಿನ ತಾಪಕ್ಕೆ ನಿತ್ಯ ರೈತರು, ಸಾರ್ವಜನಿಕರು, ಮಹಿಳೆಯರು, ವೃದ್ದರು ಹನಿ ನೀರಿಗಾಗಿ ಹಾಹಾಕಾರ ಪಡುವ ಸ್ಥಿತಿ ಇದೆ.

ಹೌದು ಫೆಬ್ರುವರಿ ಮೊದಲ ವಾರದಿಂದಲೇ ಭಯಂಕರ ಬಿಸಲಿನ ಛಾಯೆಯಿಂದ ಜನ ಅಸ್ಥವ್ಯಸ್ಥರಾಗುತ್ತಿದ್ದು. ಈಗಲೇ ಬಿಸಿಲು ಹಿಂಗೇ...! ಮುಂದೆ ಇನ್ನೆಂಗೋ...! ಬಿಸಿಲಿನ ಝಳಕ್ಕೆ ನೀರು...! ನೀರು...! ಎನ್ನುವ ಜನರು ಬಿಸಿಲಿನ ತಾಪಕ್ಕೆ ಭಯಗೊಂಡ ಮನೆ ಬಿಟ್ಟು ಹೊರ ಬರಲು ಹಿಂದೇಟು ಹಾಕುತ್ತಿರುವ ಇಂತಹ ಸಂದರ್ಭದಲ್ಲಿ ತಾಲೂಕಿನ 86 ಗ್ರಾಮಗಳಿಂದ ತಮ್ಮ ಕೆಲಸಕ್ಕೆಂದು ಬರುವ ರೈತರು,ಸಾರ್ವಜನಿಕರು ಹಾಗೂ ಮಹಿಳೆಯರು ಬಿಸಲಿನ ತಾಪದಿಂದ ಬಾಯಾರಿಕೆಯನ್ನು ತಣಿಸಿ ಕೊಳ್ಳಲು ಇಡೀ ತಹಶೀಲ್ದಾರ ಕಚೇರಿಯನ್ನೇ ಸುತ್ತು ಹಾಕಿದರೂ ಕೂಡಾ ಒಂದು ತೊಟ್ಟು ನೀರು ಸಿಗೋದಿಲ್ಲ, ಕುಡಿಯುವ ನೀರಿನ ಸಂಗ್ರಹದ ಒಂದು ಸಿಂಟ್ಯಾಕ್ಸ್‌ಂತೂ ಮೊದಲೇ ಇಲ್ಲಿ ಇಲ್ಲ. ಇದರಿಂದ ತಹಶೀಲ್ದಾರ ಕಚೇರಿಗೆ ಬರುವ ಜನರು ನಿತ್ಯ ಕುಡಿಯುವ ನೀರಿಗಾಗಿ ತಾತ್ವರ ಪಡುವಂತಾಗಿದೆ. ಕಚೇರಿಯಲ್ಲಿ ನೀರು ಸಿಗದೇ ಕಂಗಾಲಾದ ಸಾರ್ವಜನಿಕರು ತಹಶೀಲ್ದಾರ ಕಚೇರಿಯಲ್ಲಿರುವ ಮಿಲ್ಕ್ ಪಾರ್ಲರ್, ಹೊಟೇಲ್ಲಗಳಲ್ಲಿ ಹಣ ಕೊಟ್ಟು ನೀರು ಕುಡಿದು ಬಾಯಾರಿಕೆಯನ್ನು ತಣಿಸಿ ಕೊಳ್ಳುವ ಸ್ಥಿತಿ ನಿತ್ಯ ನಿರಂತರವಾಗಿದೆ.

ಇಡೀ ತಾಲೂಕಿನ ಪ್ರತಿಯೊಂದು ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ತಹಶೀಲ್ದಾರ ಸಾಹೇಬರಿಗೆ. ಸ್ವತಃ ತಮ್ಮ ಕಚೇರಿಯಲ್ಲಿಯೇ ನೀರಿನ ಬರ ಇರೋದು ಕಾಣಸ್ತಿಲ್ಲವೇನೋ ಎನ್ನುತ್ತಿದ್ದಾರೆ ನಿತ್ಯ ಬರುವ ರೈತರು ಮತ್ತು ಸಾರ್ವಜನಿಕರು. ಕೊವೀಡ್ ನಂತರ ಮಾಯವಾದ ನೀರಿನ ಸಿಂಟ್ಯಾಕ್ಸ್–ತಹಶೀಲ್ದಾರ ಕಾರ್ಯಾಲಯ ಆರಂಭದಲ್ಲಿ ಕಚೇರಿಗೆ ಬರುವ ಸಾರ್ವಜನಿಕರ ಕುಡಿಯುವ ನೀರಿನ ಅನುಕೂಲತೆಗಾಗಿ ಕಚೇರಿಯ ಬಲಭಾಗದಲ್ಲಿ ಒಂದು ಸಿಂಟ್ಯಾಕ್ಸ್ ನಿರ್ಮಿಸಿ ದಿನದ 24 ಗಂಟೆ ನೀರನ್ನು ಒದಗಿಸಲಾಗುತ್ತಿತ್ತು.ಆದರೆ 2019ರಲ್ಲಿ ಕೊವೀಡ್ ಕಾಲದಿಂದ ಆ ಜಾಗೆಯಲ್ಲಿದ್ದ ಸಿಂಟ್ಯಾಕ್ಸ ಮಾಯವಾಗಿ, ಅಲ್ಲಿಂದ ಇಲ್ಲಿವರಗೆ ಕುಡಿಯುವ ನೀರಿಗಾಗಿ ಒಂದು ಮಡಿಕೆಯನ್ನು ಸಹ ಇಟ್ಟಿಲ್ಲ, ಇದರಿಂದ ಸಾರ್ವಜನಿಕರು ಬಕಪಕ್ಷಿಯಂತೆ ಸುತ್ತಾಡಿ–ದರು ಕಚೇರಿಯಲ್ಲಿ ಒಂದು ಗುಟುಕು ನೀರು ದೊರೆಯುತ್ತಿಲ್ಲ ಎನ್ನುವುದು ಸತ್ಯ.

> ತಹಶೀಲ್ದಾರಕಚೇರಿಯಆವರಣದಲ್ಲಿಕಳೆದ ಐದಾರು ವರ್ಷಗಳಿಂದ ಸಾರ್ವಜನಿಕರ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೇ ಕಚೇರಿಗೆ ಬರುವ ಬಡ ರೈತರು ಹಣ ಕೊಟ್ಟು ನೀರು ಕುಡಿಯುವ ವ್ಯವಸ್ಥೆ ಇದೆ.ಈ ವರ್ಷ ಮಳೆಯ ಅಭಾವದಿಂದ ಬಿಸಿಲಿನ ಪ್ರಮಾಣ ಹೆಚ್ಚಾಗಿ ಬಿಸಿಲಿನ ತಾಪಕ್ಕೆ ನೀರು..! ನೀರು..! ಎನ್ನುವ ಸ್ಥಿತಿ ಇದ್ದಾಗಲೂ ತಹಶೀಲ್ದಾರ ಸಾಹೇಬರು ತಮ್ಮ ಕಚೇರಿಯ ಮುಂದೆ ಕುಡಿಯುವ ನೀರಿನ ವ್ಯವಸ್ಥೆ ಮಾಡದಿರುವುದು ಶೋಚನೀಯ ಸಂಗತಿಯಾಗಿದೆ.
>
> **–ಸಿದ್ದಪ್ಪ ಜಾಲಿಗಿಡದ**
> **ಮುಖಂಡರು ಹುನಗುಂದ**

2019 ರಿಂದ ಇಲ್ಲಿವರಗೆ ಹುನಗುಂದ ತಹಶೀಲ್ದಾರರಾಗಿ ಬಸವರಾಜ ನಾಗರಾಳ, ಶ್ವೇತಾ ಬಿಡೀಕರ, ಬಿ.ವಿ.ಮಹಾಂತ, ಜಿ.ಎಂ. ಕುಲಕರ್ಣಿ, ಬಸಲಿಂಗಪ್ಪ ನೈಕೋಡಿ ಸೇರಿ ಬರೋಬರಿ 5 ಜನ ತಹಶೀಲ್ದಾರ ಬಂದು ಹೋದರೂ ಕೂಡಾ ತಹಶೀಲ್ದಾರ ಕಚೇರಿಯ ಆವರಣದಲ್ಲಿ ಸಾರ್ವಜನಿಕರ ಕುಡಿಯುವ ನೀರನ ಒದಗಿಸುವುದರ ಬಗ್ಗೆ ಕಿಂಚಿತ್ತು ಯೋಚಸಿಲಿಲ್ಲ. ಈ ವರ್ಷ ಸಂಪೂರ್ಣ ಮಳೆಯಿಲ್ಲದೇ ಬರಗಾಲ ಆವರಿಸಿ ಭಯಂಕರ ಬಿಸಿಲು ಕಾಣಿಸಿ ಕೊಳ್ಳುತ್ತಿದ್ದು. ಸಧ್ಯ ಬಂದ ತಹಶೀಲ್ದಾರ ನಿಂಗಪ್ಪ ಬಿರಾದಾರ ಅವರಾದರೂ ಕಚೇ–ರಿಯ ಆವರಣದಲ್ಲಿ ಸಾರ್ವಜನಿಕರ ಬಗ್ಗೆ ಸ್ವಲ್ಪ ಕಾಳಜಿ ವಹಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡ್ತಾರ ಅಂತಾ ಕಾಯ್ದು ನೋಡಬೇಕಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ.ಬಂಡರಗಲ್ಲ.ಹುನಗುಂದ**

## ಹುನಗುಂದ ಕೆ.ಎಸ್.ಆರ್.ಟಿ.ಸಿ ನೂತನ ಘಟಕ ವ್ಯವಸ್ಥಾಪಕ ಅರವಿಂದ ಭಜಂತ್ರಿಯವರಿಗೆ ಸಮುದಾಯದಿಂದ ಸನ್ಮಾನ



**ಹುನಗುಂದ :** ಪಟ್ಟಣದ ಕರ್ನಾಟಕ ರಾಜ್ಯ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಯ ಹುನಗುಂದ ಘಟಕದ ನೂತನ ಘಟಕ ವ್ಯವಸ್ಥಾಪಕರಾಗಿ ಅಧಿಕಾರ ಸ್ವೀಕರಿಸಿದ ಅರವಿಂದ ಭಜಂತ್ರಿ ಅವರನ್ನು ತಾಲೂಕಿನ ಪರಿಶಿಷ್ಟ ಜಾತಿ ಸಮುದಾಯದ ಮುಖಂಡರು ಮಂಗಳವಾರ ಹುನಗುಂದ ಡೀಪೋದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಮುಖಂಡ ಬಸವರಾಜ ಹೊಸಮನಿ ಮಾತನಾಡಿ ಡಾ,ಬಾಬಾಸಾಹೇಬ ಅಂಬೇಡ್ಕರ ಅವರ ಕೊಟ್ಟ ಸಂವಿಧಾನ ಶೋಷಿತ ಸಮುದಾಯದವರು ಉನ್ನತ ಹುದ್ದೆಯನ್ನು ಪಡೆಯುತ್ತಾರೆ ಎನ್ನುವುದಕ್ಕೆ ಅರವಿಂದ ಭಜಂತ್ರಿ ಅವರು ಒಂದು ತಾಜಾ ಉದಾಹರಣೆ. ನಮ್ಮವರೊಬ್ಬರು ಘಟಕ ವ್ಯವಸ್ಥಾಪಕರಾಗಿ ಹುನಗುಂದ ಘಟಕಕ್ಕೆ ಬಂದಿದ್ದು ಸಮುದಾಯಕ್ಕೆ ಸಂತಸದ ಸಂಗತಿಯಾಗಿದೆ. ಹುನಗುಂದ ಮತ್ತು ಇಳಕಲ್ಲ ಘಟಕದಲ್ಲಿ ಸಾಕಷ್ಟು ಜನ ಎಸ್.ಸಿ ಮತ್ತು ಎಸ್.ಟಿ ನೌಕರರು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದು. ಅವರೆಲ್ಲರಿಗೂ ಒಳ್ಳೆಯ ಮಾರ್ಗದರ್ಶನ ಮಾಡುತ್ತಾ ಅವರನ್ನು ಒಟ್ಟಿಗೆ ಕರೆದುಕೊಂಡು ಹೋಗುವ ಮೂಲಕ ಘಟಕದ ಕೀರ್ತಿಯನ್ನು ರಾಜ್ಯದಲ್ಲಿ ಹೆಚ್ಚಿಸುವ ಕಾರ್ಯವನ್ನು ಮಾಡಬೇಕು ಎಂದರು.

ಸನ್ಮಾನ ಸ್ವೀಕರಿಸಿ ನೂತನ ಘಟಕ ವ್ಯವಸ್ಥಾಪಕ ಅರವಿಂದ ಭಜಂತ್ರಿ ಮಾತನಾಡಿ ನಮ್ಮವರು ಎನ್ನುವ ಅಭಿಮಾನವನ್ನು ಇಟ್ಟಕೊಂಡು ಬಂದು ನನ್ನ ಸನ್ಮಾನಿಸಿದ್ದಕ್ಕೆ ನಾನು ಯಾವಾಗಲೂ ಚಿರ ಋಣಿಯಾಗಿದ್ದೇನೆ. ನೀವು ಇಟ್ಟುಕೊಂಡ ಆಸೆ ಆಕಾಂಕ್ಷೆಗಳಿಗೆ ಚ್ಯುತಿ ತರದ್ದಂತೆ ನಡೆದುಕೊಂಡು ಹುನಗುಂದ ಘಟಕವನ್ನು ರಾಜ್ಯದಲ್ಲಿಯೇ ಒಂದು ಮಾದರಿ ಘಟಕವನ್ನಾಗಿ ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂದರು.

ಮುಖಂಡ ಹನಮಂತ ನಡುವಿನಮನಿ ಮಾತನಾಡಿ ಹುನಗುಂದ ತಾಲೂಕಿನ ಅನೇಕ ಗ್ರಾಮಗಳಿಂದ ವಾಸ್ಕೋ ಪಟ್ಟಣಕ್ಕೆ ದುಡಿಮೆ ಮಾಡಲು ಹೋಗುತ್ತಿದ್ದು. ಇಳಕಲ್ಲ ಘಟಕದಿಂದ ಒಂದೇ ಒಂದು ಬಸ್ ವ್ಯವಸ್ಥೆ ಇರೋದರಿಂದ ಆ ಬಸ್ ಇಳಕಲ್ಲದಲ್ಲಿಯೇ ತುಂಬಿ ಬರುತ್ತಿದ್ದು.ಇದರಿಂದ ಹುನಗುಂದದಿಂದ ವಾಸ್ಕೋಕ್ಕೆ ಪ್ರಯಾಣಿಸುತ್ತಿರುವ ಸಾಕಷ್ಟು ಜನರಿಗೆ ತೊಂದರೆ ಯಾಗುತ್ತಿದೆ.ದಯವಿಟ್ಟು ಹುನಗುಂದ ಘಟಕದಿಂದ ವಾಸ್ಕೋಕ್ಕೆ ಒಂದು ಬಸ್ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶ್ಯಾಮ ಮುದೋಳ, ಮಹಾಂತೇಶ ಭಜಂತ್ರಿ, ಮುತ್ತಣ್ಣ ಭಜಂತ್ರಿ, ಮುದಕಪ್ಪ ಪೂಜಾರಿ, ಶಿವಪುತ್ರಪ್ಪ ಭಜಂತ್ರಿ, ರವಿ ಮಾದರ, ವಿಜಯ ಭಾವಿಕಟ್ಟಿ, ಮಲ್ಲಿಕಾರ್ಜುನ ಹೊಸಮನಿ, ಚಾಲಕ ಕನಕಪ್ಪ ಮಾದರ ಹಾಗೂ ಕೆಎಸ್‌ಆರ್ಟಿಸಿ ಸಿಬ್ಬಂದಿಗಳು ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ.ಎಂ.ಬಂಡರಗಲ್ಲ. ಹುನಗುಂದ**

## ಮೀಸಲು ಕ್ಷೇತ್ರಗಳಲ್ಲಿ ಮಾದಿಗರಿಗೆ ಅವಕಾಶ ಕಲ್ಪಿಸಿ: ಮುತ್ತಣ್ಣ ಮೇತ್ರಿ



**ಜಮಖಂಡಿ :** ಮುಂಬರುವ ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರದಲ್ಲಿ 5 ಸ್ಥಾನ ಮೀಸಲು ಕ್ಷೇತ್ರವಾಗಿದ್ದು 5 ಕ್ಷೇತ್ರದಲ್ಲಿ 3 ಕ್ಷೇತ್ರದಲ್ಲಿ ಸಹೋದರ ಚಲವಾದಿ ಸಮುದಾಯಕ್ಕೆ ನೀಡಿದ್ದು ಸಂತೋಷಕರ ವಿಷಯ ಇನ್ನುಳಿದ ಎರಡು ಮೀಸಲು ಕ್ಷೇತ್ರವಾದ ಕೋಲಾರ್ ಮತ್ತು ಚಿತ್ರದುಗ–ರ್ಕ್ಕೆ ಮಾದಿಗ ಸಮುದಾಯಕ್ಕೆ ಟಿಕೆಟ್ ನೀಡಲು ಹೈಕಮಾಂಡಕ್ಕೆ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಬಾಗಲಕೋಟ ಜಿಲ್ಲಾ ಸಂಸಂಚಾಲಕ ಮುತ್ತಣ್ಣ ಮೇತ್ರಿ ಆಗ್ರಹಿಸಿದ್ದಾರೆ ಈ ದೇಶದ ಗಾಂಧಿ ಮನೆತನದ ಯುವ ನಾಯಕ ರಾಹುಲ್ ಗಾಂಧಿ ಅವರ ಆಶಯದಂತೆ ಮಹಿಳೆಯರಿಗೆ ಮತ್ತು ಯುವಕರಿಗೆ ಹೆಚ್ಚಿನ ಸ್ಥಾನವನ್ನು ನೀಡ ಬೇಕೆಂಬುವುದು ಅವರ ನಿಲುವಾಗಿದ್ದು ಅದಕ್ಕಾಗಿ ಅಬಕಾರಿ ಸಚಿವರು ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ನೀರಾವರಿ ಹರಿಕಾರರು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಆರ್ ಬಿ ತಿಮ್ಮಾಪುರ ಅವರ ಪುತ್ರ ಕಾಂಗ್ರೆಸ್ ಪಕ್ಷದ ರಾಜ್ಯ ಎಸ್ ಸಿ ವಿಭಾಗದ ಯುವ ಮುಖಂಡ ವಿನಯ ತಿಮ್ಮಾಪುರ ಅವರಿಗೆ ಚಿತ್ರದುರ್ಗ ಲೋಕಸಭಾ ಟಿಕೆಟ್ ನೀಡಿದರೆ ಅವರ ಗೆಲುವು ನಿಶ್ಚಿತ ಇದನ್ನೆಲ್ಲವನ್ನು ಎಐಸಿಸಿ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಪಕ್ಷದ ರಾಜ್ಯ ಉಸ್ತುವಾರಿಯಾದ ಸುರ್ಜೆವಾಲ ಕೆಪಿಸಿಸಿ ಅಧ್ಯಕ್ಷರಾದ ಡಿಕೆ ಶಿವಕುಮಾರ್ ಈ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರಿಗೆ ಒತ್ತಾಯಿಸುತ್ತೇವೆ ಚಿತ್ರದುರ್ಗ ಲೋಕಸಭಾ ಟಿಕೆಟ್ ವಿನಯ ತಿಮ್ಮಾಪುರ ಅವರಿಗೆ ನೀಡಿದರೆ ಅವರು ಗೆಲವು ನಿಶ್ಚಿತವಾಗುವುದು, ಶ್ರೀ ವಿನಯ್ ತಿಮ್ಮಾಪುರ ಅವರಿಗೆ ಚಿತ್ರದುಗ–ರ್ ಸಂಸದ ಟಿಕೆಟ್ ನೀಡಿದರೆ ಇಡೀ ರಾಜ್ಯದ ಮಾದಿಗ ಸಮುದಾಯ 28 ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಲಿದ್ದೆವೆ ಎಂದು ಮುತ್ತಣ್ಣ ಮೇತ್ರಿಯವರು ತಿಳಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ದಲಿತ ಮುಖಂಡರಾದ ಮುತ್ತಣ್ಣ ಮೇತ್ರಿ ದಾನೇಶ್ ಘಾಟಗೆ ಗೋವಿಂದ ಗಸ್ತಿ ವಿಲಾಸ್ ನಡುವಿನಮನಿ ಮಾರುತಿ ಮರೆಗುದ್ದಿ ಸಂಜು ಪೂಜಾರಿ ಉದಯ ಕಡಕೋಳ ಸೇರಿ ಪತ್ರಿಕಾ ಪ್ರಕಟಣೆ ಮೂಲಕ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ರವರಲ್ಲಿ ಮನವಿ ಮಾಡಿದ್ದಾರೆ.

## ವಿದ್ಯಾರ್ಥಿಗಳಲ್ಲಿ ಮಾತೃಭಾಷೆ ಬಗ್ಗೆ ಅಭಿಮಾನವಿರಲಿ: ಪೂಜಾರಿ




**ರಬಕವಿ–ಬನಹಟ್ಟಿ :** ವಿದ್ಯಾರ್ಥಿಗಳಲ್ಲಿ ಮಾತೃಭಾಷೆ ಬಗ್ಗೆ ಪ್ರೀತಿ, ಅಭಿಮಾನ ಇರಲಿ. ಭಾಷೆಯ ಮೇಲೆ ಪ್ರಭುತ್ವವನ್ನು ಸಾಧಿಸಿ ಎಂದು ರಬಕವಿಯ ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ ಹೇಳಿದರು.

ಅವರು ರಾಮಪುರದ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಜೀವನದಲ್ಲಿ ವೈಜ್ಞಾನಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಿ. ಸರಿಯಾಗಿ ಕಲಿಯುವುದೇ ವಿಜ್ಞಾನ. ಏಕಾಗ್ರತೆಯನ್ನು ಸಾಧಿಸಿದರೆ ಜೀವನದಲ್ಲಿ ಯಶಸ್ಸು ಸಾಧ್ಯ. ಹಣದಿಂದ ಆನಂದ ಸಿಗುವುದಿಲ್ಲ. ಕಲೆ, ಸಂಗೀತ, ಸಾಹಿತ್ಯದಿಂದ ಆನಂದ ಸಿಗುತ್ತದೆ ಎಂದು ಸಿದ್ದರಾಜ ಪೂಜಾರಿ ಹೇಳಿದರು.

ವಿದ್ಯಾರ್ಥಿಗಳು ಸೂಕ್ಷ್ಮವಾಗಿ ಗೃಹಿಸುವ ಶಕ್ತಿ ಬೆಳೆಸಿಕೊಳ್ಳಿ. ಇದರಿಂದ ನಿಮ್ಮ ಭವಿಷ್ಯಕ್ಕೆ ಅನುಕೂಲವಾಗುತ್ತದೆ. ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಶ್ರೇಷ್ಠ ಮನುಷ್ಯರಾಗಿ ಬಾಳಿ. ಓದುವುದರ ಮೇಲೆ ಪ್ರೀತಿ ಇರಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕರಾದ ಬಿ. ಎಂ. ಹಳೇಮನಿ ಮಾತನಾಡಿ ತಂದೆ ತಾಯಿ, ಗುರು ಹಿರಿಯರನ್ನು ಗೌರವಿಸಿ, ಸಂಸ್ಥೆಯ ಬೆಳವಣಿಗೆಯಲ್ಲಿ ನಿಮ್ಮ ಪಾತ್ರ ಮುಖ್ಯ. ಉತ್ತಮವಾಗಿ ಅಭ್ಯಾಸ ಮಾಡಿ ಎಂದು ಕಿವಿಮಾತು ಹೇಳಿದರು.

ಸಂಸ್ಥೆಯ ಕಾರ್ಯದರ್ಶಿ ಎಸ್. ಎಂ. ನದಾಫ, ಎಸ್. ಎಸ್. ಪರಮಶೆಟ್ಟಿ , ಡಾ. ಶ್ರೀಶೈಲ ಮಾದನ್ನವರ, ಸಂಸ್ಥೆಯ ಅಧ್ಯಕ್ಷ ಸಿದ್ದಪ್ಪ ವೆಂಕಪ್ಪ ಮೇಣಿ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ರಾಮದಾಸ ಸಿಂಘನ, ಖಜಾಂಚಿ ಎಸ್. ಕೆ. ಕರಡಿ, ಶ್ರೀಮತಿ ಬೌರಮ್ಮ ಆರ್. ಬಾಗಲಕೋಟ, ಎ. ಕೆ. ಕಾಡದೇವರ, ಎಸ್. ಬಿ. ಹಟ್ಟಿ, ಎಸ್. ಎಂ. ನದಾಫ್, ಎ. ಎಚ್. ಬಾಗೆನ್ನವರ, ಎಸ್. ಬಿ. ಬಸನ್ನವರ, ಎಸ್. ಸಿ. ಬಾಗಲಕೋಟ, ಎಸ್. ಎಂ. ಹಾಡಕರ, ಎಲ್. ಪಿ. ಗಂಟೆನ್ನವರ, ಎಫ್. ಜೆ. ಬಾಗವಾನ, ಡಬ್ಲ್ಯೂ. ಎಂ. ಮಿರಗನ್ನವರ, ಎ. ಆರ್. ನಾಗರಾಳ, ಎಸ್. ಬಿ. ಪೆಂಢಾರಿ, ಎಸ್. ಬಿ. ಉಳವಿಮಠ, ಎಸ್. ಎಂ. ಚತುರಬಾನ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಸಹಕಾರಿ ಸಂಘದಿಂದ ನೇಕಾರರ ಅಭಿವೃದ್ಧಿಯತ್ತ ಗಮನ



**ರಬಕವಿ–ಬನಹಟ್ಟಿ :** ನೇಕಾರರು ಮತ್ತು ನೇಕಾರಿಕೆಯ ವೃತ್ತಿಯನ್ನು ಅವಲಂಬಿತರು ಅಭಿವೃದ್ಧಿಯಾಗುವ ನಿಟ್ಟಿನಲ್ಲಿ ನೇಕಾರ ಪತ್ತಿನ ಸಹಕಾರಿ ಸಂಘವು ಗಮನ ನೀಡುತ್ತಿದೆ ಎಂದು ಬಾಗಲಕೋಟೆಯ ಪತ್ತಿನ ಸಹಕಾರಿ ಸಂಘಕ್ಕೆ ಬನಹಟ್ಟಿ ಶಾಖೆಯಿಂದ ನಿರ್ದೇಶಕರಾಗಿ ಇತ್ತೀಚೆಗೆ ಅವಿರೋಧವಾಗಿ ಆಯ್ಕೆಯಾದ ಪ್ರಕಾಶ ಮಂಡಿ ತಿಳಿಸಿದರು.

ಶನಿವಾರ ಸ್ಥಳೀಯ ಶಾಖೆಯಲ್ಲಿ ಸಹಕಾರಿ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷ ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ನೇಕಾರರು ಮತ್ತು ಜವಳಿ ಉದ್ದಿಮೆ ಇಂದು ಸಂಕಷ್ಟದ ಸ್ಥಿತಿಯಲ್ಲಿದೆ. ನೇಕಾರಿಕೆಯ ವೃತ್ತಿಯನ್ನು ಅವಲಂಬಿಸಿದ ಸಾವಿರಾರು ಸಂಖ್ಯೆಯ ನೇಕಾರಿಕೆಯ ಕುಟುಂಬಗಳು ಅತಂತ್ರ ಸ್ಥಿತಿಯಲ್ಲಿವೆ. ಆದ್ದರಿಂದ ಮುಂಬರುವ ದಿನಗಳಲ್ಲಿ ನೇಕಾರರ ಅಭಿವೃದ್ಧಿ ಮತ್ತು ಜವಳಿ ಉದ್ಯಮ ಉಳಿಯುವ ದಿಶೆಯಲ್ಲಿ ಸಂಘವು ಗಮನ ನೀಡಲಿದೆ ಎಂದು ಮಂಡಿ ತಿಳಿಸಿದರು.

ಕಾರ್ಯಕ್ರಮದಲ್ಲಿ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಸಂಗಪ್ಪ ಜಮಖಂಡಿ, ನೂತನ ನಿರ್ದೇಶಕರಾಗಿ ಆಯ್ಕೆಯಾದ ಪ್ರಕಾಶ ಮಂಡಿ, ಅಲ್ಲಪ್ಪ ಇಂಗಳಗಿ, ಈರಪ್ಪ ಹನಗಂಡಿ ಮತ್ತು ಹಿರಿಯರಾದ ದೇವಕಿಶನ್ ರಾಠಿಯವರನ್ನು ಸನ್ಮಾನಿಸಲಾಯಿತು. ಈಶ್ವರ ಕಾಡದೇವರ, ಎಸ್. ಎಸ್. ಮಠ, ಓಂಪ್ರಕಾಶ ಬಾಗೇವಾಡಿ, ಮಲಕಾಜಪ್ಪ ಧಡೂತಿ, ಮಲ್ಲಪ್ಪ ಉಮರ್ಜಿ, ಆನಂದ ಧರ್ಮಟ್ಟಿ, ಮುರಗಯ್ಯ ಕತ್ತಿಮಠ, ಬಸವರಾಜ ಕರಡಿ, ಅಮೃತಾ ಖವಾಸಿ, ಪ್ರವೀಣ ವಜ್ರಮಟ್ಟಿ, ಕಿರಣಕುಮಾರ ಕೊಕಟನೂರ, ದಶರಥ ಬಾಗಲಕೋಟ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಧರ್ಮ ಮಾರ್ಗದಲ್ಲಿ ನಡೆದರೆ ಜಯ ನಿಶ್ಚಿತ



**ರಬಕವಿ–ಬನಹಟ್ಟಿ :** ಧರ್ಮ ಮತ್ತು ಭಕ್ತಿ ಮಾರ್ಗದಲ್ಲಿ ನಡೆದರೆ ಜಯ ನಿಶ್ಚಿತ. ದೇವರಲ್ಲಿ ಶ್ರದ್ಧಾಪೂರ್ವ ಭಕ್ತಿ ಇರಬೇಕು. ದೇವರನ್ನು ಸದಾ ನೆನೆದು ತಮ್ಮನ್ನು ತಾವು ಸಮರ್ಪಿಸಿಕೊಳ್ಳಿ . ದೇವರು ಕೈ ಬಿಡಲಾರ ಎಂದು ಹಳೇ ಹುಬ್ಬಳ್ಳಿ ನೀಲಕಂಠಮಠದ ಜಗದ್ಗುರು ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ನಾವಲಗಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಉದ್ಘಾಟನೆ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ, ಆರೋಗ್ಯಪೂರ್ಣ ಜೀವನ ಶ್ರೇಷ್ಠವಾದದ್ದು. ಭಕ್ತರು ಶ್ರೀ ಮಠದ ಏಳಿಗೆಗೆ ನಿರಂತರ ಶ್ರಮಿಸಲು ಕರೆ ನೀಡಿದರು.

ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಶ್ರೀ ಗುರುಸಿದ್ಧೇಶ್ವರ ಮಹಾಸ್ವಾಮಿಗಳು ಮಾತನಾಡಿ, ಮಠ ಮತ್ತು ದೇವಾಲಯ ಸಮಾಜದ ಎರಡು ಕಣ್ಣುಗಳಿದ್ದಂತೆ. ದೇವರನ್ನು ಪ್ರೀತಿಸುವ ಭಾರತೀಯರು ದೇವಸ್ಥಾನ ಸಂಸ್ಕೃತಿ, ಸಂಸ್ಕಾರ ಪ್ರೀತಿಸುತ್ತಾರೆ. ದೇವರು ಧರ್ಮವನ್ನು ಬಿಟ್ಟರೆ ಉಳಿಗಾಲವಿಲ್ಲ ಎಂದು ಹೇಳಿದರು.

ಜಮಖಂಡಿ ಮುತ್ತಿನಕಂತಿ ಮಠದ ಶ್ರೀ ಷ. ಬ್ರ. ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಮನಸೆಂಬ ಹೊಲದಲ್ಲಿ ಪ್ರೀತಿ ವಾತ್ಸಲ್ಯ ಕರುಣೆ ಕ್ಷಮೆ ಬಿತ್ತಬೇಕು. ಅಸೂಯೆ, ತಾಪ, ಸಿಟ್ಟು, ಸೆಡವು ಬಿತ್ತಬಾರದು ಎಂದರು.

ತೇರದಾಳ ಶಾಸಕ ಸಿದ್ದೂ ಸವದಿ, ಸಿದ್ದೂ ಕೊಣ್ಣೂರ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಯಮನವ್ವ ಬಸಪ್ಪ ಕಂಚು, ನೇಕಾರರ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಮಹಾಲಿಂಗ ಕಲ್ಲೊಳ್ಳಿ ಮಿರ್ಜಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಮ. ಕೃ. ಮೇಗಾಡಿ, ಮನೋಹರ ಜಾಲಿಹಾಳ ದಂಪತಿಗಳು, ಸದಾಶಿವ ಹಳ್ಳೂರ, ರವಿ ಕೊರ್ತಿ, ಮಹಾಲಿಂಗಪ್ಪ ತೆಳಗಿನಮನಿ ಸೇ–ರಿದಂತೆ ವಿವಿಧ ಊರುಗಳಿಂದ ಆಗಮಿಸಿದ ಕುರುಹಿನಶೆಟ್ಟಿ ಸಮಾಜದ ಹಿರಿಯರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿದರು.

ಬಸಯ್ಯ ಹಿರೇಮಠ ಸ್ವಾಮಿಗಳು, ಬಸಯ್ಯ ಮಠಪತಿ, ಬಸಪ್ಪ ಎಂಟೆತ್ತಿನವರ, ಸುಭಾಸ ಕಂಪು, ಶಿವನಪ್ಪ ಹಳ್ಳಿ, ಚಿನ್ನಪ್ಪ ಸಂಗಾನಟ್ಟಿ , ಚನಮಲ್ಲಪ್ಪ ಯಡಪ್ಪನವರ, ಮಹಾದೇವಪ್ಪ ಹಳ್ಳಿ ವೇದಿಕೆಯ ಮೇಲಿದ್ದರು.

ನಾವಲಗಿ ಗ್ರಾಮದ ವೇದಮೂರ್ತಿ ಶ್ರೀ ಶ್ರೀಶೈಲಯ್ಯ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು.

ಶೃದ್ಧಾ ಅಮ್ಮಲಝೇರಿ ಸಂಗಡಿಗರು ಸುಶ್ರಾವ್ಯವಾಗಿ ಪ್ರಾರ್ಥಿಸಿದರು. ಕಾಡೇಶ ಕಂಪು ಸೊಗಸಾಗಿ ನಿರೂಪಿಸಿದರು.

ಉತ್ಸವ : ನಾವಲಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವ ನಡೆಯಿತು. ಸಕಲ ವಾದ್ಯವೃಂದದವರು ಪಾಲ್ಗೊಂಡಿದ್ದರು.

ಬಸಯ್ಯ ಹಿರೇಮಠ ಸ್ವಾಮಿಗಳು, ಬಸಯ್ಯ ಮಠಪತಿ, ಬಸಪ್ಪ ಎಂಟೆತ್ತಿನವರ, ಸುಭಾಸ ಕಂಪು, ಶಿವನಪ್ಪ ಹಳ್ಳಿ, ಚಿನ್ನಪ್ಪ ಸಂಗಾನಟ್ಟಿ, ಮಹಾದೇವಪ್ಪ ಹಳ್ಳಿ, ಪರಮಾನಂದ ಹಳ್ಳಿ, ಮಂಜುನಾಥ ಕಂಪು, ಮಲ್ಲಪ್ಪ ಸಂಗಾನಟ್ಟಿ, ಸುಭಾಸ ಕಾಂತಿ, ಆನಂದ ಕಂಪು, ದಾನಪ್ಪ ಆಸಂಗಿ, ಎಂ. ಆರ್. ವಾಲಿ, ಗಂಗಪ್ಪ ಅಮ್ಮಲಜೇರಿ, ಮಲ್ಲಪ್ಪ ಗಣಿ, ಶಂಕರೆಪ್ಪ ಹಳ್ಳಿ , ಈರಪ್ಪ ವಾಲಿ, ಚಿನ್ನಪ್ಪ ಹಳ್ಳಿ , ಜೀವಪ್ಪ ಬಡಿಗೇರ, ದುಂಡೇಶ ಹಳ್ಳಿ , ಶ್ರೀಧರ ಹಳ್ಳಿ, ಗಿರಮಲ್ಲಪ್ಪ ಹಳ್ಳಿ, ಮಹೇಶ ಚಿಂಚಖಂಡಿ, ಸಿದ್ದೂ ಹಳ್ಳಿ , ಸಿದ್ದೂ ಸಣಪೇಟಿ, ಶ್ರೀಶೈಲ ಹಳ್ಳಿ , ಮಹೇಶ ಕಂಪು, ಮಲ್ಲಪ್ಪ ಗಂಗಾವತಿ ಇನ್ನಿತರರು ಉಪಸ್ಥಿತರಿದ್ದರು.

# ಮಹಾಶಿವರಾತ್ರಿ ಸಂಭ್ರಮ: ಎಲ್ಲೆಡೆ ಶಿವಸ್ಮರಣೆ





**ಮಹಾಲಿಂಗಪುರ:** ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಶುಕ್ರವಾರ ಮಹಾಶಿವರಾತ್ರಿ ಹಬ್ಬವನ್ನು ಜಾಗರಣೆ, ಉಪವಾಸ, ಭಜನೆ, ಶಿವನಾಮ ಸ್ಮರಣೆಯೊಂದಿಗೆ ಸಂಭ್ರಮದಿಂದ ಆಚರಿಸಲಾಯಿತು.
ಪಟ್ಟಣದ ಮಹಾಲಿಂಗೇಶ್ವರ ದೇವಸ್ಥಾನ, ಚನ್ನಗಿರೇಶ್ವರ ದೇವಸ್ಥಾನ, ನೀಲಕಂಠೇಶ್ವರ ದೇವಸ್ಥಾನ, ರನ್ನಬೆಳಗಲಿಯ ಮಹಾಲಿಂಗೇಶ್ವರ ದೇವಸ್ಥಾನ, ರಾಮಲಿಂಗೇಶ್ವರ ದೇವಸ್ಥಾನ, ಐತಿಹಾಸಿಕ ಅಮೃತೇಶ್ವರ ದೇವಸ್ಥಾನ, ಚಿಮ್ಮಡದ ಪ್ರಭುಲಿಂಗೇಶ್ವರ ದೇವಸ್ಥಾನ, ಢವಳೇಶ್ವರದ ರಾಮಲಿಂಗೇಶ್ವರ ದೇವಸ್ಥಾನ, ಸೈದಾಪುರದ ಶಿವಲಿಂಗೇಶ್ವರ ದೇವಸ್ಥಾನ ಸೇರಿದಂತೆ ಪ್ರಮುಖ ದೇವಾಲಯಗಳಲ್ಲಿ ಇಡೀ ದಿನ ಶಿವನಾಮ ಸ್ಮರಣೆ, ಅಖಂಡ ಭಜನೆ ನಡೆಯಿತು. ಭಕ್ತರಿಂದ ನಿರಂತರ ಓಂನಮಃಶಿವಾಯ ಪಂಚಾಕ್ಷರಿ ಮಂತ್ರ ಪಠಣ ನಡೆಯಿತು. ಅಂಬಲಿ ಸೇವೆ, ವಿಶೇಷ ಪೂಜೆ, ರುದ್ರಾಭಿಷೇಕ, ಸಹಸ್ರ ನಾಮಾರ್ಚನೆ, ಬಿಲ್ವಾರ್ಚನೆ ನಡೆದವು. ದೇವಾಲಯಗಳನ್ನು ತೋರಣದಿಂದ ಸಿಂಗರಿಸಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಢವಳೇಶ್ವರ ಗ್ರಾಮದ ಹಿಂದು ರುದ್ರಭೂಮಿಯಲ್ಲಿ ಇಡೀ ದಿನ ಜಾಗರಣೆ, ಪ್ರವಚನ ಕಾರ್ಯಕ್ರಮ ನಡೆಯಿತು.

### ಬಿಳ್ಕೊಡುಗೆ ಹಾಗೂ ಸ್ನೇಹ ಸಮ್ಮೇಳನ

# ಹೆತ್ತವರ ಸೇವೆ ಮಾಡಿ ಬದುಕು ಸಾರ್ಥಕ ಮಾಡಿಕೊಳ್ಳಿ: ಪ್ರಭು ಸ್ವಾಮಿಜಿ



**ಮಹಾಲಿಂಗಪುರ :** ಜಗತ್ತಿನಲ್ಲಿ ಎಲ್ಲರ ಋಣ ತೀರಿಸಬಹುದು ಆದರೆ ಹೆತ್ತ ತಂದೆ-ತಾಯಿ, ಅಕ್ಷರ ಕಲಿಸಿದ ಗುರುಗಳ ಋಣವನ್ನು ತೀರಿಸಲು ಸಾಧ್ಯವಿಲ್ಲ. ಆದರೆ ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆದು, ಅವರ ಸೇವೆ ಮಾಡಿ ಬದುಕನ್ನು ಸಾಥ-ರ್ಕಮಾಡಿಕೊಳ್ಳಬೇಕು ಎಂದು ಚಿಮ್ಮಡ ವಿರಕ್ತಮಠದ ಪ್ರಭು ಸ್ವಾಮಿಜಿ ಹೇಳಿದರು.
ಬನಶಂಕರಿ ಸಾಂಸ್ಕೃತಿಕ ಭವನದಲ್ಲಿ ಜರುಗಿದ ಬಸವಾನಂದ ಶಾಲೆಯ 7 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನದ ಸಾನಿಧ್ಯವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಕಲಿಕಾ ಹಂತದಲ್ಲಿ ಟಿವ್ಹಿ, ಮೋಬೈಲ, ಸಾಮಾಜಿಕ ಜಾಲತಾಣಗಳಿಂದ ದೂರವಿದ್ದು, ನಿರ್ದಿಷ್ಟ ಗುರಿ ಸಾಧನೆಗಾಗಿ ಶ್ರದ್ದೆಯಿಂದ ಅಧ್ಯಯನ ಮಾಡಿರಿ ಎಂದರು.
ಬಸವಾನಂದ ಶಿಕ್ಷಣ ಸಂಸ್ಥೆಯ ಸದಸ್ಯ ಡಾ.ಬಿ.ಡಿ.ಸೋರಗಾಂವಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಹಿರಿಯರಾದ ಬಸವರಾಜ ಢಪಳಾಪೂರ, ಚನ್ನಪ್ಪ ಪಟ್ಟಣಶೆಟ್ಟಿ, ಕೆ.ಸಿ.ಚಿಂಚಲಿ, ಸಿ.ಎಂ.ಕಟಗಿ, ಗಣ್ಯವ್ಯಾಪಾರಸ್ಥರಾದ ಅಲ್ಲಪ್ಪ ಗುಂ-ಜಿಗಾಂವಿ, ಲಕ್ಕಪ್ಪ ಚಮಕೇರಿ, ಮಲ್ಲಪ್ಪ ಭಾವಿಕಟ್ಟಿ ಇದ್ದರು.
ಮುಖ್ಯಶಿಕ್ಷಕ ಎಸ್.ಕೆ.ಗಿಂಡೆ ವಾರ್ಷಿಕ ವರದಿ ವಾಚಿಸಿದರು. ಪ್ರತಿಭಾನ್ವಿತ ಮಕ್ಕಳಿಗೆ ಪ್ರಶಸ್ತಿಪತ್ರಗಳನ್ನು ವಿತರಿಸಲಾಯಿತು. ಕಳೆದ ವರ್ಷ ಎಸ್‌ಎಸ್-ಎಲ್‌ಸಿಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಹಾಗೂ ಸಾನಿಧ್ಯವಹಿಸಿದ್ದ ಚಿಮ್ಮಡ ಪ್ರಭು ಸ್ವಾಮಿ-ಜಿಯವರನ್ನು ಸನ್ಮಾನಿಸಿ ಗೌರವಿಸಲಾಯಿತು.
ಎಸ್.ಡಿ.ಕಾಂಬಳೆಕರ ಸ್ವಾಗತಿಸಿದರು. ಎಸ್. ಆಯ್. ಸುತಾರ, ಎಸ್.ಎಂ.ಮೂಗಳಖೋಡ ನಿರೂಪಿಸಿದರು. ತೌಫಿಕ್ ಮಾಲಾಪೂರ ವಂದಿಸಿದರು.

# ಊಟ, ಬಟ್ಟೆಯಷ್ಟೇ ಅಧ್ಯಾತ್ಮ ಮುಖ್ಯ: ರುದ್ರಮುನಿ ಶ್ರೀಗಳು



**ಜಮಖಂಡಿ :** ಮನುಷ್ಯನ ಬದುಕಿಗೆ ಊಟ, ಬಟ್ಟೆಯಷ್ಟೇ ಅಧ್ಯಾತ್ಮವೂ ಮುಖ್ಯ. ಆದ್ದರಿಂದ ಆಧ್ಯಾತ್ಮಿಕ ಜೀವನದಲ್ಲಿ ಶಿವನಾಮ ಸ್ಮರಣೆ ಬಹಳ ಶ್ರೇಷ್ಠ. ಗುರುಗಳ ಮೇಲಿನ ನಂಬಿಕೆ ಮತ್ತು ಭಕ್ತಿಯೂ ಅಷ್ಟೇ ಮುಖ್ಯ. ಭಕ್ತಿಯಿಂದ ಪೂಜಿಸಿದರೆ ಭಗವಂತ ಒಲಿಯುತ್ತಾನೆ ಎಂದು ಆಲಮಟ್ಟಿಯ ಪುರವರ ಮಠದ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.
ತಾಲ್ಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದಲ್ಲಿ ಶುಕ್ರವಾರ ಸಂಜೆ ನಡೆದ ಮಹಾಶಿವರಾತ್ರಿ ಹಾಗೂ ಗುರುಮಹೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.
ತಿಕೋಟಾದ ವಿರಕ್ತಮಠದ ಚೆನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ದೇವಾಲಯಕ್ಕೆ ಹೋಗುವುದಕ್ಕಿಂತ ಮೊದಲು ಗುರುಗಳ ಕಡೆಗೆ ಹೋಗಬೇಕು. ಜೀವನದಲ್ಲಿ ನಗುತ್ತ ಇರಬೇಕು. ಚಿಂತೆ ಮಾಡುವುದು ಜೀವನವಲ್ಲ ಎಂದು ಆಶೀರ್ವಚನ ನೀಡಿದರು.
ಹುಲ್ಯಾಳ ಓಂಕಾರ ಆಶ್ರಮದ ಮಾತೋಶ್ರೀ ಜಯಶ್ರೀ ಅಮ್ಮನವರು ಸಾನ್ನಿಧ್ಯ ವಹಿಸಿ ಮಾತನಾಡಿ, ಪ್ರತಿ ರಾತ್ರಿಯೂ ಶಿವರಾತ್ರಿ ಆಗಬೇಕು. ಜನ್ಮದಲ್ಲಿ ಮರುಜನ್ಮ ಕೊಟ್ಟವರು ಸದ್ಗುರುಗಳು. ಸದ್ಗುರುವಿಗಿಂತಧಿಕ ಬಂಧುಗಳಿಲ್ಲ. ನಮಗೆ ರಕ್ಷಣೆ ಕೊಡುವವರು ಸದ್ಗುರುಗಳು. ಜಗತ್ತಿನ ಒಡೆಯ ಭಗವಂತ. ಕೈಯಲ್ಲಿ ಕೆಲಸ ಮನದಲ್ಲಿ ಭಗವಂತನ ಸ್ಮರಣೆ ಇರಬೇಕು ಎಂದರು.
ಜಮಖಂಡಿಯ ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಹುಲ ಕಲೂತಿ ಮುಖ್ಯ ಅತಿಥಿಯಾಗಿ ಮಾತನಾಡಿ, ಯಾವಾಗ ನಮ್ಮೊಂದಿಗೆ ಯಾರೂ ಇಲ್ಲ ಎಂಬ ಭಾವನೆ ಮೂಡುತ್ತದೆಯೊ ಆವಾಗ ಶಿವ ನಮ್ಮೊಂದಿಗೆ ಇರುತ್ತಾನೆ ಎಂದರು.
ಸಿದ್ದಾಪುರ ಅಡವಿಸಿದ್ಧೇಶ್ವರ ಮಠದ ಮಾತೋಶ್ರೀ ಮಹಾದೇವಿ ಅಮ್ಮನವರು ಆಶೀರ್ವಚನ ನೀಡಿದರು. ವಿಧಾನ ಪರಿಷತ್‌ನ ಮಾಜಿ ಸದಸ್ಯ ಜಿ.ಎಸ್. ನ್ಯಾಮಗೌಡ, ನಿರಾಣಿ ಉದ್ಯಮ ಸಮೂಹ ಸಂಸ್ಥೆಗಳ ಕಾರ್ಯನಿರ್ವಾಹಕ ನಿರ್ದೇಶಕ ಸಂಗಮೇಶ ನಿರಾಣಿ ಮಾತನಾಡಿದರು.
ಹಿರಿಯ ಸಾಹಿತಿ ಡಾ.ಸಂಗಮೇಶ ಬಿರಾದಾರ, ಹಿರಿಯ ಪತ್ರಕರ್ತ ಎಂ.ಸಿ. ಗೊಂದಿ ಅವರನ್ನು ಸನ್ಮಾನಿಸಲಾಯಿತು. ಗುರುದೇವಾಶ್ರಮದ ಹರ್ಷಾನಂದ ಶ್ರೀಗಳು ಜಪಯಜ್ಞ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
ಪುಂಡಲೀಕ ಭಜಂತ್ರಿ ಕ್ಲ್ಯಾ-ರಿನೆಟ್ ನುಡಿಸಿದರು. ಸರಸ್ವತಿ ಸಬರದ, ಶಿವಾನಂದ ಬಡನವರ (ಹಾರ್ಮೋನಿಯಂ), ರಾಮಚಂದ್ರ ಹೂಗಾರ(ತಬಲಾ) ಸಂಗೀತ ಸೇವೆ ಸಲ್ಲಿಸಿದರು. ನಿವೃತ್ತ ಶಿಕ್ಷಕ ಗುರುನಾಥ ಸುತಾರ ಸ್ವಾಗತಿಸಿದರು. ಸಾಹಿತಿ ಪ್ರೊ.ಬಸವರಾಜ ಕಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುತ್ತು ಸೊನ್ನದ, ಮಲ್ಲೇಶ ಗೆದ್ದೆಪ್ಪನವರ ನಿರೂಪಿಸಿದರು.
ಅದೇ ದಿನ ಬೆಳಿಗ್ಗೆ ಶ್ರೀಗುರುದೇವರ ಪಾದುಕೆ ಮಹಾಪೂಜೆ, ಸಾಮೂಹಿಕ ಲಿಂಗಪೂಜೆ ನೆರವೇರಿತು. ಸಂಜೆ ಮುತ್ತೈದೆಯರ ಉಡಿ ತುಂಬು ಕಾರ್ಯಕ್ರಮ ಜರುಗಿತು. ಮುಧೋಳ ತಾಲ್ಲೂಕಿನ ರೂಗಿಯ ಶ್ರೀಸತ್ಯಸಾಯಿ ಭಜನಾ ಮಂಡಳಿಯ ಕಲಾವಿದರು ರಾತ್ರಿಯಿಡಿ ಶಿವಭಜನೆ ಮಾಡಿದರು.

# ಮಹಿಳೆ ಕುಟುಂಬದ ಕಣ್ಣು: ಡಾ. ಮೇನಕಾ ಯಾದವಾಡ



**ಮಹಾಲಿಂಗಪುರ :** ಒಬ್ಬ ಮಹಿಳೆ ಕುಟುಂಬದ ಕಣ್ಣು. ತನ್ನ ಸರ್ವಸ್ವವನ್ನುತ್ಯಾಗ ಮಾಡಿಕುಟುಂಬವನ್ನು ಮುನ್ನಡೆಸುವವಳು ಆಕೆ ತ್ಯಾಗಜೀವಿ ಎಂದು ಡಾ.ಮನೆಕಾ ಯಾದವಾಡ ಹೇಳಿದರು.
ಪಟ್ಟಣದ ಮಿಲನ ಆರೋಗ್ಯ ಕ್ಷೇಮ ಕೇಂದ್ರದಲ್ಲಿ ಹಮ್ಮಿಕೊಂಡ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರತಿದಿನ ಕುಟುಂಬ ಸಂರಕ್ಷಣೆ ಸೇರಿದಂತೆಎಲ್ಲಡೆಯೂ ಪಾಲ್ಗೊಳ್ಳುವ ಏಕೈಕ ವ್ಯಕ್ತಿಎಂದರೆ ಮಹಿಳೆ. ಆದ-ರಿಂದಲೇ ಆಕೆಗೆ ವಿಶಿಷ್ಟ ಸ್ಥಾನ ಸಿಕ್ಕಿದೆ ಎಂದರು.
ಪುರಸಭೆ ಮಾಜಿ ಅಧ್ಯಕ್ಷ ಬಿ.ಎಂ. ಯಾದವಾಡ ಮಾತನಾಡಿ, ಇಂದು ನಮ್ಮೆಲ್ಲರಿಗೂ ಉತ್ತಮಆಹಾರ ಸಿಗುತ್ತಿಲ್ಲ. ಹೀಗಾಗಿ, ಅತ್ಯುತ್ತಮ ಆಹಾರ ಪದ್ಧತಿ ರೂಢಿಸಿಕೊಳ್ಳಬೇಕು ಎಂದರು.
ಸಾಧಕ ಮಹಿಳೆಯರನ್ನು ಸನ್ಮಾನಿಸಲಾಯಿತು. ಪುರಸಭೆ ಮಾಜಿ ಅಧ್ಯಕ್ಷ ಜಿ.ಎಸ್.ಗೊಂಬಿ ಮಾತನಾಡಿದರು. ಜಿ.ಎಸ್.ಬರಗಿ, ಫಾತೀಮಾ ಯಾದವಾಡ, ಅಲ್ಫಿಯಾ ಯಾದವಾಡ, ಬಂಗಾರೆವ್ವ ಕಂಕಣವಾಡಿ, ವಿಜಯಾ ಉಪಾಧ್ಯೆ, ಮಹಾದೇವಿ ಹಡಪದ, ಚಂದ್ರವ್ವಹಡಪದ, ಶಬಾನಾ ಯಾದವಾಡ, ಹಣಮಂತ ಜಮಾದಾರ, ಮಾರುತಿ ಕೆಂಚವ್ವಗೋಳ ಸೇರಿದಂತೆ ಹಲವರು ಇದ್ದರು.

## ಬೀರಸಿದ್ಧೇಶ್ವರ ಜಾತ್ರೆಯಲ್ಲಿ ಪಲ್ಲಕ್ಕಿ ಉತ್ಸವ



**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪಗ್ರಾಮದಲ್ಲಿ ಬೀರಸಿದ್ಧೇಶ್ವರ ಜಾತ್ರೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇ-ರಿದವು.
ಬೆಳಿಗ್ಗೆ ಗ್ರಾಮ ದೇವರುಗಳ ಅಭಿಷೇಕ ನೆರವೇರಿಸಲಾಯಿತು. ನಂತರ ಮದಭಾವಿಯ ಬೀರಸಿದ್ದೇಶ್ವರ ಪೂಜೇರಿಅವರಿಂದ ಆಲಗ ಹಾಯುತ ಕಾರ್ಯಕ್ರಮ ನಡೆಯಿತು.
ಗ್ರಾಮದಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ಜರುಗಿತು. ಮಧ್ಯಾಹ್ನ ಮಹಾಪ್ರಸಾದದ ನಂತರ ಸುಪ್ರಸಿದ್ಧ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯಿತು. ಕಲಗುರ್ಕಿಯ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ ಹಾಗೂ ಮುತ್ತೂ-ರಿನ ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘದವರು ಡೊಳ್ಳಿನ ಹಾಡುಗಳನ್ನು ಪ್ರಸ್ತುತಪಡಿಸಿದರು. ಲಕ್ಷ್ಮೀ ಪೂಜೇರಿ, ಅಕ್ಷತಾ ಮುತ್ತೂರ ಮುಖ್ಯಗಾಯಕರಾಗಿದ್ದರು.
ಮುಖಂಡರಾದ ಅಲ್ಲಪ್ಪದಡ್ಡಿಮನಿ, ಶ್ರೀಶೈಲ ಚಿನಗುಂಡಿ, ರುದ್ರಪ್ಪ ತೇಲಿ ಇತರರು ಭಾಗವಹಿಸಿದ್ದರು. ಡೊಳ್ಳಿನ ಹಾಡುಗಳ ಕಾರ್ಯಕ್ರಮದೊಂದಿಗೆ ಜಾತ್ರೆ ಸಮಾರೋಪಗೊಂಡಿತು.

# ಮನೆ, ಶಾಲೆ ವಾತಾವರಣ ಒಂದೇ ಇರಲಿ



**ಮಹಾಲಿಂಗಪುರ :** ಮಕ್ಕಳಿಗೆ ಮನೆ ಹಾಗೂ ಶಾಲೆ ವಾತಾವರಣಎರಡೂಒಂದೇರೀತಿಇರಬೇಕು. ಇದರಿಂದ ಮಕ್ಕಳು ಬೆಳವಣಿಗೆ ಹೊಂದಲು ಸಾಧ್ಯ ಎಂದು ಕೆಎಲ್‌ಇ ಪ್ರೌಢಶಾಲೆ ವಿಜ್ಞಾನ ಶಿಕ್ಷಕಿ ಸಪ್ನಾ ಅನಿಗೋಳ ಹೇಳಿದರು.
ಪಟ್ಟಣದ ಪ್ರಗತಿ ಸಮುದಾಯ ಶಿಕ್ಷಣ ಸಂಸ್ಥೆಯ ಪ್ರಗತಿ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಯಲ್ಲಿ ಇತ್ತಿಚಿಗೆ ಹಮ್ಮಿಕೊಂಡ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.
ಮಕ್ಕಳಿಗೆ ಶಾಲೆಯಲ್ಲಿ ಕಲಿಸಿದ ಸಂಸ್ಕಾರವು ಮನೆಯೊಳಗೂ ಮುಂದುವರೆಯಬೇಕು. ಇದನ್ನು ಪಾಲಕರು ನೋಡಿಕೊಳ್ಳಬೇಕು. ಸಂಸ್ಕಾರಇರದಿದ್ದರೆ ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆಎಂದರು.
ಕಳ್ಳಿಗುದ್ದಿ-ಕಪರಟ್ಟಿಯ ಗುರುದೇವಾಶ್ರಮದ ಬಸವರಾಜ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು. ಸಂಸ್ಥೆಯ ಕಾರ್ಯಾಧ್ಯಕ್ಷ ಬಸವರಾಜ ಮಾನೆ ಉದ್ಘಾಟಿಸಿದರು. ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಪುರಸಭೆ ಸದಸ್ಯ ರವಿ ಜವಳಗಿ, ಎಸ್.ಟಿ.ಮಠಪತಿ, ಭೀಮಶಿ ಗೌಂಡಿ, ಸಾಗರ ಮಠದ, ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಮಹಾಲಿಂಗಯ್ಯ ಮಠ, ಪ್ರೌಢಶಾಲೆ ಮುಖ್ಯ ಶಿಕ್ಷಕ ಎಚ್.ಡಿ.ಬ್ಯಾಕೋಡ, ಡಿ.ಎಸ್.ಲವಗಿ, ಸಿ.ಬಿ.ಸಂಗನ್ನವರ ಸೇರಿದಂತೆ ಹಲವರು ಇದ್ದರು.

# ನಮ್ಮ ಅವಧಿಯಲ್ಲಿ ವಿಶೇಷ ಯೋಜನೆಗಳು ಜಾರಿಗೆ: ಜತ್ತಿ



**ಜಮಖಂಡಿ :** ವಕೀಲರ ಚುನಾವಣೆಯಲ್ಲಿ ನೂತನವಾಗಿ ಆಯ್ಕೆಗೊಂಡ ಸದಸ್ಯರು ನೇಮಕ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ಪ್ರದಗ್ರಹಣ ಸಮಾರಂಭ ನಡೆಯಲಿದೆ ಎಂದು ವಕೀಲರ ಸಂಘದ ನೂತನ ಅಧ್ಯಕ್ಷ ಡಿ.ಎಂ.ಜತ್ತಿ ಹೇಳಿದರು.
ನಗರದ ವಕೀಲರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮಖಂಡಿ ವಕೀಲರ ಸಂಘ ತನ್ನದೇಯಾದ ಇತಿಹಾಸ ಹೊಂದಿದೆ. ಇತಿಹಾಸದ ಪುಟಗಳಲ್ಲಿ ನಮ್ಮ ವಕೀಲರ ಸಂಘ-ದ ಬಿ.ಡಿ.ಜತ್ತಿ ಅವರು ದೇಶದ ಉಪರಾಷ್ಟಪತಿಗಳಾಗಿದ್ದಾರೆ. ಸಚಿವರಾಗಿ ಜಿ. ಎಸ್. ಬಾಗ'ಲಕೋಟ, ವಿ.ಎಸ್.ಪತ್ತಾರ ಸಹಿತ ಹಲವರು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ.
ಹೊಸ ಆಡಳಿತ ಮಂಡಳಿಯವರು ಎರಡು ವರ್ಷದ ಅವಧಿಯಲ್ಲಿ ಯುವ ವಕೀಲರ ಸ್ಪರ್ದಾತ್ಮಕ ಮತ್ತು ನ್ಯಾಯಾಧೀಶರ ಪರೀಕ್ಷೆಗಳಿಗೆ ಅನಕೂಲಕ್ಕಾಗಿ ವಿಶೇಷ ಅನುಭವಿ ನ್ಯಾಯಾಧೀಶರಿಂದ ಕಾನೂನು ಕಾರ್ಯಾಗಾರ, ವಕೀಲರು ದಿನನಿತ್ಯ ಓದುವ ಹವ್ಯಾಸಿಗರಾದ್ದ-ರಿಂದ ಡಿಜಿಟಲ್ ಲೈಬ್ರರಿ, ಪಾರ್ಕಿಂಗ ವ್ಯವಸ್ಥೆ ಕಲ್ಪಿಸುವ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.
ಫನಲ್ ವಕೀಲ ಶ್ರೀಶೈಲ ಕಾಳೆ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ವಕೀಲರಾದ ಎಸ್.ಪಿ.ಪಾರಶೆಟ್ಟಿ, ಎಸ್.ಸಿ. ಕುರಣಿ, ಬಿ.ಎಸ್. ತೇಲಿ, ಎಸ್.ಬಿ.ಪಾರಶೆಟ್ಟಿ, ಎಸ್.ಬಿ.ಭೋಸಲೆ, ಬಸವರಾಜ ಕಾಳೆ, ಎ.ಎಸ್.ಕೌಜಲಗಿ ಸಹಿತ ಹಲವರು ಇದ್ದರು.

## ಸಾಂವಕ್ಕ ಮುಧೋಳ ನಿಧನ



**ಬೆಟಗೇರಿ :** ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಸದಸ್ಯೆ ಸಾಂವಕ್ಕ ಶಿವಪುತ್ರಪ್ಪ ಮುಧೋಳ(70) ಇವರು ಗುರುವಾರ ಮಾ.7ರಂದು ನಿಧನರಾದರು. ಮೃತರು ಸ್ಥಳೀಯ ಪತ್ರಕರ್ತ ಅಡಿವೇಶ ಮುಧೋಳ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು, ಅಪಾರ ಬಂದು-ಬಳಗವನ್ನಗಲಿದ್ದಾರೆ.
ಸಂತಾಪ: ಬೆಟಗೇರಿ ಗ್ರಾಮದ ಪತ್ರಕರ್ತ ಅಡಿವೇಶ ಮುಧೋಳ ಅವರ ಮಾತೋಶ್ರೀ ಸಾಂವಕ್ಕ ಶಿವಪುತ್ರಪ್ಪ ಮುಧೋಳ ಅವರ ನಿಧನಕ್ಕೆ ಶಾಸಕರುಗಳಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

# ಕಾನೂನು ಸುವ್ಯವಸ್ಥೆಯಲ್ಲಿ ಕರ್ನಾಟಕ ಪೋಲೀಸ್ ಪ್ರಥಮ



**ಜಮಖಂಡಿ :** ನಮ್ಮ ದೇಶದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ತಡೆ ನಿಯಂತ್ರಣದಲ್ಲಿ ದೇಶದಲ್ಲಿ ನಮ್ಮ ಕರ್ನಾಟಕ ಪೊಲೀಸ್ ಇಲಾಖೆ ಪ್ರಥಮ ಸ್ಥಾನದಲ್ಲಿದೆ ಎಂದು ಡಿವೈಎಸ್ಪಿ ಈ.ಶಾಂತವೀರ ಹೇಳಿದರು.
ನಗರದ ಎಸ್.ಆರ್.ಎ. ಕ್ಲಬ್ ಹತ್ತಿರ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಸುವರ್ಣ ಮಹೋತ್ಸವ ನಿಮಿತ್ತ 5 ಕಿ.ಮೀ ಮ್ಯಾರಥಾನಗೆ ಚಾಲನೆ ನೀಡಿ ಮಾತನಾಡಿದ ಅವರು, ಪೊಲಿಸ್ ಇಲಾಖೆಯಲ್ಲಿ ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ಕಾಳಜಿಯೊಂದಿಗೆ ಸಧೃಡ ಶರೀರ ಹೊಂದುವದು ಕಡ್ಡಾಯವಾಗಿದೆ. ಸಾಮಾನ್ಯ ಜನರಿಗೆ ನಾವು ಮಾದ-ರಿಯಾಗಿ ಸಮಾಜವನ್ನು ಕಾಪಾಡಬೇಕಾಗಿದೆ. ಇಂದಿನ ಯುವಕರು ಆಯೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಮ್ಯಾರಥಾನ್ ಓಟವನ್ನು ಹಮ್ಮಿಕೊಳ್ಳಲಾಗಿದೆ ಎಂದರು.
ಇದೇಸಂದರ್ಭದಲ್ಲಿ ಸಿಪಿಐ ಮಲ್ಲಪ್ಪ ಮಡ್ಡಿ, ಬನಹಟ್ಟಿಯ ಸಿಪಿಐ ಸಂಜು ಬಳಗಾರ, ಪಿಎಸ್.ಐಗಳಾದ ನಾಗರಾಜ ಕಿಲಾರಿ, ಮಹೇಶ ಸಂಖ, ಆರಕ್ಷಕರಾದ ಪರಶುರಾಮ ಮನಗೂಳಿ, ರೇಣುಕಾ ಹಳ್ಳಿ, ರಮೇಶ ಪಾಟೀಲ, ಹಾಲಪ್ಪ ಬಾಲದಿಂಡಿ, ಪ್ರವೀಣ ಬೀಳಗಿ, ಅಪ್ಪಣ್ಣ ಐಗಳಿ ಸಹಿತ ಹಲವರು ಇದ್ದರು.
ನಗರದ ಎಸ್‌ಆರ್‌ಎ ಕ್ಲಬ್ ಹತ್ತಿರ ಆರಂಭಗೊಂಡ ಮ್ಯಾರಥಾನ್ ನಗರದ ಎ.ಜಿ.ದೇಸಾಯಿ ವೃತ್ತ, ಅಶೋಕ ವೃತ್ತ, ಪೋಸ್ಟಚೌಕ, ಹನುಮಾನ ಚೌಕ ಸಹಿತ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು.

# ಮದರಸಾಗಳು ಗುಣಾತ್ಮಕ ಶಿಕ್ಷಣ ಪಡೆಯುವಲ್ಲಿ ಹಿಂದೆ ಬಿದ್ದಿಲ್ಲ: ಮೌಲಾನಾ ಇಸ್ಮಾಯಿಲ್ ಮುಲ್ಲಾ



**ನಾಲತವಾಡ :** ಮದರಸಾಗಳಲ್ಲಿ ಸಾಂಪ್ರದಾಯಿಕವಾದ ಧಾರ್ಮಿಕ ಶಿಕ್ಷಣದ ಜೊತೆಗೆ, ಆಧುನಿಕ ಶಿಕ್ಷಣವನ್ನು ನೀಡುವ ಮೂಲಕ ಅಲ್ಪಸಂಖ್ಯಾತರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಕಳೆದ 14 ವರ್ಷಗಳಿಂದ ನಡೆಸಲಾಗುತ್ತಿರುವ ಮದರಸಾ ಸದ್ಯ ಗುಣಾತ್ಮಕ ಶಿಕ್ಷಣ ಯೋಜನೆಯ ಸದುಪಯೋಗ ಪಡೆಯುವಲ್ಲಿ ಮದರಸಾ ಹಿಂದೆ ಬಿದ್ದಿಲ್ಲ ಎಂದು ಮೌಲಾನಾ ಇಸ್ಮಾಯಿಲ್ ಮುಲ್ಲಾ ನುಡಿದರು.
ನಾಲತವಾಡದ ಪಟ್ಟಣದ ಅಂಜುಮನ್ ಇಸ್ಲಾಮ್ ಕಮಿಟಿ ವತಿಯಿಂದ ಇತ್ತೀಚಿಗೆ ಏರ್ಪಡಿಸಲಾದ ಜಾಮೀಯಾ ಮಸೀದಿ ಮಕ್ತಬ್ ಸಾಲಾನ್ ಜಲಸಾ 2024 ರ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿದ ಅವರು, ಇಸ್ಲಾಮ್ ಧರ್ಮದ ಧರ್ಮಗ್ರಂಥ ಕುರಾನ್ ಕುರಿತಂತೆ ಪ್ರತಿನಿತ್ಯ ಬೆಳಗ್ಗೆ6 ಘಂಟೆಯಿಂದ 8 ಘಂಟೆಯವರೆಗೆ ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಒಂದನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಮದರಸಾಗಳಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಹಿಂದಿ, ಇಂಗ್ಲಿಷ್, ಕಂಪ್ಯೂಟರ್ ಶಿಕ್ಷಣವನ್ನು ನೀಡಲು ಈ ಯೋಜನೆಯಡಿ ನಾಲತವಾಡ ಅಂಜುಮನ್ ಇಸ್ಲಾಮ್ ಕಮಿಟಿ ಹಾಗೂ ಮುಸ್ಲಿಮ್ ಕುಟುಂಬಗಳ ಪ್ರಮುಖರು ಅನುದಾನ ನೀಡುತ್ತಿದ್ದಾರೆ. ಆಧುನಿಕ ಶಿಕ್ಷಣ ನೀಡಲು ಬೇಕಾದ ಶಿಕ್ಷಕರನ್ನು ಮದರಸಾ ನೇಮಕ ಮಾಡಿಕೊಂಡಿದೆ ಎಂದರು.
ಈ ವೇಳೆ ವೇದಿಕೆಯ ಮೇಲೆ ಮೌಲಾನ ಇಸ್ಮಾಯಿಲ್ ಮುಲ್ಲಾ, ಅಂಜುಮನ್ ಕಮಿಟಿ ಅಧ್ಯಕ್ಷರಾದ ಲಾಳೇಮಶಾಕ್ ಅವಟಿ, ಉಪಾಧ್ಯಕ್ಷ ಭಾಸೇಸಾಬ್ ತೆಗ್ಗಿನಮನಿ, ಅಂಜುಮನ್ ಕಮಿಟಿ ಸದಸ್ಯರಾದ ಮೌಲಾಸಾಬ್ ರಕ್ಕಸಗಿ, ಉರ್ದು ಶಾಲೆಯ ಮುಖ್ಯೋಪಾದ್ಯಾಯ ಎ.ಎಚ್.ಖಾಜಿ, ಉಮರ್ ಫಾರೂಕ್ ಮೂಲಿಮನಿ, ಕಾಸಿಂಸಾಬ್ ಅವಟಿ, ಜಾಕಿರ್ ಮಾಯ್ನಬಾಯಿ, ಮೆಹಬೂಬ್ ಕುಂಟೋಜಿ.ಹ, ಊರಿನ ಹಿರಿಯರಾದ. ಅಬ್ದುಲ್ ಗನಿ ಖಾಜಿ, ಇಬ್ರಾಹಿಂ ಮುಲ್ಲಾ, ಹುಸೇನ್ ಸಾಬ್ ಮೂಲಿಮನಿ, ಅಲ್ಲಾಭಕ್ಷ ಮೂಲಿಮನಿ, ಅಬ್ದುಲ್ ರಜಾಕ್ ನಾಯ್ಕೋಡಿ, ದಸ್ತಗಿರಸಾಬ್ ಆರೇಶಂಕರ ,ಅಲ್ಲಾಭಕ್ಷ ಕುಳಗೇರಿ, ಜಾಫರ್ ಮಕಾಂದಾರ್ ಇದ್ದರು. ಕಾರ್ಯಕ್ರಮವನ್ನು ಅಲ್ಲಾಭಕ್ಷ್ ಖಾಜಿ ನಿರೂಪಿಸಿ ವಂದಿಸಿದರು.

**ವರದಿ ಖುಷ್ಟರ್ ಚೋಪ್ದಾರ್ ಮುದ್ದೇಬಿಹಾಳ**

# ಭಾರತೀಯ ಸಂಸ್ಕೃತಿಯ ಉಳಿವಿಗಾಗಿ ಜಯಂತಿ ಆಚರಣೆಗಳ ಅಗತ್ಯತೆ



**ರಬಕವಿ-ಬನಹಟ್ಟಿ :** ಮಹಾಶಿವರಾತ್ರಿಯಂದು ಶಿವದಾಸಿಮಯ್ಯನವರಂತಹ ಮಹಾನ್ ಶರಣರ ಜಯಂತಿಯನ್ನು ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ. ಭಾರತೀಯ ಸಂಸ್ಕೃತಿಯ ಉಳಿವಿಗಾಗಿ ಮಹಾತ್ಮರ ಜಯಂತಿ ಆಚರಣೆಗಳು ಅತ್ಯಗತ್ಯವಾಗಿವೆ. ಮಹಾಶಿವರಾತ್ರಿಯನ್ನು ದೇಶಾದ್ಯಂತ ಲಕ್ಷಾಂತರ ಭಕ್ತರು ಸದ್ಭಕ್ತಿಯಿಂದ ಆಚರಿಸುತ್ತಾರೆ ಎಂದು ಬನಹಟ್ಟಿ ಹಿರೇಮಠದ ವೇದಮೂರ್ತಿ ಚರಂತಯ್ಯ ಹಿರೇಮಠ ಹೇಳಿದರು.

ಶುಕ್ರವಾರ ಸಂಜೆ ಬನಹಟ್ಟಿಯಲ್ಲಿ ಶಿವಸಿಂಪಿ ಸಮಾಜ ಅಭಿವೃದ್ಧಿ ಸಂಘದ ವತಿಯಿಂದ ಮಹಾಶಿವರಾತ್ರಿಯಂದು ನಡೆದ ಶಿವದಾಸಿಮಯ್ಯನವರ ಜಯಂತಿ ಉತ್ಸವ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಸಾನಿಧ್ಯ ವಹಿಸಿದ್ದ ಬನಹಟ್ಟಿ ಮಹಾಂತ ಮಂದಾರ ಮಠದ ಶರಣರಾದ ಮಹಾಂತ ದೇವರು ಮಾತನಾಡಿ, ರಜೆಯಿಲ್ಲದೆ ಸರ್ಕಾರವೇ ಶಿವದಾಸಿಮಯ್ಯ ಜಯಂತಿ ಆಚರಿಸಬೇಕು. ಈ ಸಮುದಾಯಕ್ಕೆ ೨ಎ ಮೀಸಲು ಅಧಿಕೃತವಾಗಿ ಘೋಷಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದು, ತಕ್ಷಣವೇ ಅದು ಜಾರಿಯಾಗಬೇಕು ಎಂದರು. ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಇತ್ತೀಚಿನ ದಿನಗಳಲ್ಲಿ ಪ್ರಗತಿ ಕಾಣುತ್ತಿರುವ ಶಿವಸಿಂಪಿ ಸಮಾಜ ರಾಜಕೀಯವಾಗಿಯೂ ಮುನ್ನಡೆಯಬೇಕೆಂದರು. ಪ್ರತಿಯೊಬ್ಬರೂ ಸಮಾಜದೊಂದಿಗೆ ಬೆರೆತು ಸಂಘಟಿತ ಸಮಾಜ ನಿರ್ಮಿಸಿದ್ದಲ್ಲಿ ಸಮಾಜದೊಂದಿಗೆ ವ್ಯಕ್ತಿಯೂ ಬೆಳೆಯಲು ಸಾಧ್ಯ. ಆ ದಿಶೆಯಲ್ಲಿ ಪ್ರತಿಯೊಬ್ಬರೂ ಸಂಘಟಿತರಾಗಬೇಕು. ಅಂದಾಗ ಮಾತ್ರ ಸಮಾಜದ ಏಳಿಗೆ ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಬಕವಿ - ಬನಹಟ್ಟಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವಿಶ್ವಜ ಕಾಡದೇವರ ಮಾತನಾಡಿ, ಸಮಾಜದ ಸಂಘಟನೆಯಲ್ಲಿ ಪ್ರತಿಯೊಬ್ಬರ ಜವಾಬ್ದಾರಿಗಳು ಬಹಳಷ್ಟು ಮಹತ್ವದ್ದಾಗಿವೆ. ಮುಂದಿನ ದಿನಗಳಲ್ಲಿ ಶಿವಸಿಂಪಿ ಸಮಾಜದ ಅಭಿವೃದ್ಧಿಯಾಗಬೇಕಾದರೆ ಮಕ್ಕಳಿಗೆ ಉತ್ತಮ ಸಂಸ್ಕಾರ, ಶೈಕ್ಷಣಿಕ ಅರ್ಹತೆಗಳು ಮುಖ್ಯವಾಗಿವೆ. ನಾನು ಎಂಬುದು ಅವಸಾನದ ಸಂಕೇತವಾದರೆ ಸಮಾಜ ಎಂದರೆ ಅದು ಅಭಿವೃದ್ಧಿಯಾಗಿದೆ. ಪ್ರಬುದ್ಧವಾದ ಸಮಾಜ ನಿರ್ಮಾಣಕ್ಕಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ಸಮಾಜ ಬಾಂಧವರು ಒಂದೆಡೆ ಕೂಡಿ ನಮ್ಮೆಲ್ಲರ ವಿಚಾರ ವಿನಿಮಯ ಮಾಡಿಕೊಳ್ಳಲು ಇಂಥ ಸಂಘಟನೆಗಳು ಮುಖ್ಯವಾಗಿವೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಬನಹಟ್ಟಿ ಶಿವಸಿಂಪಿ ಸಮಾಜದ ಅಧ್ಯಕ್ಷ ಸಿದ್ಧಲಿಂಗಪ್ಪ ತುಂಗಳ ವಹಿಸಿದ್ದರು.

ಈ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿನಿಯರಾದ ಕೀರ್ತಿ ಆಳಗಿ, ಐಶ್ವರ್ಯ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಶ್ರೀಶೈಲ ಶಿರೋಳ, ಬಸವರಾಜ ಐವಳ್ಳಿ, ನಂದು ಬುರಾಣಪುರ, ಶಶಿಕಾಂತ ಮೋಳೆ, ಬಸವರಾಜ ಪಾವಟೆ, ಸದಾಶಿವ ಪಾವಟೆ, ಮಹಾದೇವ ತುಂಗಳ, ಮಲ್ಲಪ್ಪ ಐವಳ್ಳಿ, ಈರಪ್ಪ ಜತ್ತಿ, ಗಂಗಾಧರ ಫಿರಂಗಿ, ಶಂಕರ ತುಂಗಳ, ಮಹೇಶ ಗಂಗಾವತಿ, ಬಸವರಾಜ ಜತ್ತಿ, ಕುಮಾರ ಪಾವಟೆ, ಪ್ರೇಮಾ ಐವಳ್ಳಿ , ಮಂಜುಳಾ ಶಿರೋಳ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

ಕಿರಣ ಆಳಗಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲ್ಲಿಕಾರ್ಜುನ ತುಂಗಳ ಸೊಗಸಾಗಿ ನಿರೂಪಿಸಿದರು. ಕೊನೆಗೆ ಆನಂದ ಆಳಗಿ ವಂದನಾರ್ಪಣೆಗೈದರು.

# ರಬಕವಿಯಲ್ಲಿ ಅದ್ದೂರಿಯಿಂದ ಜರುಗಿದ ಶಿವದಾಸಿಮಯ್ಯನವರ ಜಯಂತ್ಯೋತ್ಸವ



**ರಬಕವಿ-ಬನಹಟ್ಟಿ:**ಹನ್ನೆರಡನೆಯಶತಮಾನದಲ್ಲಿಆಗಿ ಹೋಗಿರುವ ಹಲವಾರು ಶರಣರ-ದಾರ್ಶನಿಕರಲ್ಲಿ ಸಮಾಜ ಪರಿವರ್ತಕರಲ್ಲಿ ಶಿವದಾಸಿಮಯ್ಯ ಕೂಡ ಒಬ್ಬರು. ಸರಳ ಜೀವನ ಸಾಗಿಸುತ್ತಲೇ, ದೈನಂದಿನ ಜೀವನವನ್ನು ನಡೆಸುತ್ತಲೇ, ಸರಳತೆಯನ್ನು, ಆದರ್ಶವನ್ನು ಸಾಧಿಸಿದವರು. ಇಂಥವರ ಆದರ್ಶವನ್ನು ಅನುಸರಿಸುವ ಕಾರ್ಯವನ್ನು ಸಮಾಜ ಬಾಂಧವರು ಮಾಡಬೇಕೆಂದು ಅಧ್ಯಕ್ಷರಾದ ಸಿದ್ದಣ್ಣ ಸಣಕಾಲ ಹೇಳಿದರು.

ಅವರು ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಶಿವದಾಸಿಮಯ್ಯನವರ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಕಾರ್ಯದರ್ಶಿ ಚಿದಾನಂದ ಸೊಲ್ಲಾಪುರ ಮಾತನಾಡಿ, ಶಿವಶಿಂಪಿ ಎಂಬ ಸಣ್ಣ ಸಮಾಜ ಇಲ್ಲದೇ ಇರುತ್ತಿದ್ದರೆ, ನಮಗೆ ಬಟ್ಟೆಯೇ ಇರುತ್ತಿರಲಿಲ್ಲ. ಹಿಂದೆ ಜಾತಿಗಳಿರಲಿಲ್ಲ. ವೃತ್ತಿಗಳೇ ಜಾತಿಗಳಾಗಿದ್ದವು. ಯಾವುದೇ ಸಮುದಾಯ ಮುಂದೆ ಬರಬೇಕಿದ್ದರೆ ಆ ಸಮಾಜಕ್ಕೆ ಶಿಕ್ಷಣ ನೀಡಬೇಕು. ಈ ಶಿವಶಿಂಪಿ ಸಮುದಾಯವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪ್ರಗತಿ ಹೊಂದಬೇಕೆಂದು ತಿಳಿಸಿದರು.

ಚೇರಮನ್ನರಾದ ಪ್ರಕಾಶ ಸಣಕಾಲ ಪ್ರಾಸ್ತಾವಿಕವಾಗಿ ಮಾತನಾಡಿ, ಶಿವಶಿಂಪಿ ಸಮಾಜವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗು ರಾಜಕೀಯವಾಗಿ ಸಬಲರಾಗಿ ಒಳ್ಳೆಯ ಪ್ರಗತಿ ಸಾಧಿಸಲು ಸರ್ಕಾರ ಪ್ರೋತ್ಸಾಹಿಸಬೇಕೆಂದು ಒತ್ತಾಯಿಸಿದರು.

ಕಾರ್ಯಕಾರಿ ಮಂಡಳಿ ಸದಸ್ಯರಾದ ಚಂದ್ರಶೇಖರ ಚೆನ್ನಿ, ಮಲ್ಲೇಶಪ್ಪ ಸವದಿ, ಶ್ರೀಶೈಲ ಭೂಯ್ಯಾರ, ಸಿ. ಎಸ್. ತೆಲಸಂಗ, ಚಂದ್ರು ಭೂಯಾರ, ಪ್ರವೀಣ ಪಾವಟೆ, ನಾಗಪ್ಪ ಅರಬಳ್ಳಿ , ಶ್ರೀಶೈಲ ಭೂಯಾರ, ದಾನಪ್ಪ ತುಂಗಳ, ಸಿದ್ಧರಾಮ ಸೋಲಾಪುರ, ರಾಜು ಆಸಂಗಿ, ಶಶಿಕಾಂತ ಜತ್ತಿ ವೇದಿಕೆ ಮೇಲೆ ಇದ್ದರು.

ಈ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಾದ ಸಮರ್ಥ ಸಿಂದಗಿ, ಪ್ರಸನ್ನಕುಮಾರ ಅರಬಳ್ಳಿ, ಸಂದೀಪ ಚಟ್ಟೇರ, ಸಮರ್ಥ ಅರಬಳ್ಳಿ ಅವರನ್ನು ಸನ್ಮಾನಿಸಲಾಯಿತು.

ದೇವಕಿ ಅರಬಳ್ಳಿ ವಚನ ಗಾಯನ, ಪೂರ್ಬಿಕಾ ಅರಬಳ್ಳಿ ಪ್ರಾರ್ಥನೆ ನಡೆಸಿಕೊಟ್ಟರು. ಬಾಬು ಗಂಗಾವತಿ ಸಾಮೂಹಿಕ ಪ್ರಾರ್ಥನೆ ನಡೆಸಿಕೊಟ್ಟರು. ಶ್ರೀಮತಿ ಭಾರತಿ ಪಾವಟೆ ಶಿವದಾಸಿಮಯ್ಯನವರ ಕುರಿತು ಉಪನ್ಯಾಸ ನೀಡಿದರು.

ಸಮಾಜದ ನೂರಾರು ಬಂಧು ಭಗಿನಿಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ಕಾರ್ಯದರ್ಶಿ ಸೋಲಾಪುರ ಸಮಾಜದ ಲೆಕ್ಕಪತ್ರ ಮಂಡಿಸಿದರು. ವಿನಾಯಕ ಜತ್ತಿ ನಿರೂಪಿಸಿದರು. ಶಶಿಕಾಂತ ಜತ್ತಿ ವಂದಿಸಿದರು.

# ಮಹಿಳೆಯರು ಆರೋಗ್ಯದ ರಕ್ಷಣೆ ಬಗ್ಗೆ ಕಾಳಜಿ ವಹಿಸಬೇಕು



**ರಬಕವಿ-ಬನಹಟ್ಟಿ :** ಇಂದಿನ ದಿನಗಳಲ್ಲಿ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಸಾಕಷ್ಟು ಕಾಳಜಿ ತೆಗೆದುಕೊಳ್ಳುವುದರ ಜೊತೆಗೆ ನಿಯಮಿತವಾಗಿ ತಮ್ಮ ಆರೋಗ್ಯದ ತಪಾಸಣೆಯನ್ನು ಮಾಡಿಸಿಕೊಳ್ಳುತ್ತಿರಬೇಕು. ಮಹಿಳೆಯರು ಪೌಷ್ಠಿಕ ಆಹಾರವನ್ನು ಸೇವಿಸಬೇಕು. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಕುರಿತು ತಜ್ಞ ವೈದ್ಯರ ಜೊತೆಗೆ ಮುಕ್ತವಾಗಿ ಹೇಳಿಕೊಳ್ಳುವಂತಾಗಬೇಕು ಎಂದು ಡಾ. ವಿಜಯಲಕ್ಷ್ಮಿ ಕರೋಲಿ ತಿಳಿಸಿದರು.

ಶನಿವಾರ ಇಲ್ಲಿನ ಈಶ್ವರಲಿಂಗ ಮೈದಾನದಲ್ಲಿ ಪರಮೇಶ್ವರಿ ಸಹಕಾರಿ ಸಂಘವು ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಸಂಘದ ಅಧ್ಯಕ್ಷೆ ಮಾಲಾ ಬಾವಲತ್ತಿ ಮಾತನಾಡಿ, ಮಹಿಳೆಯರು ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯ ಮಾಡುತ್ತಿದ್ದಾರೆ. ಮಹಿಳೆ ಆರ್ಥಿಕವಾಗಿ ಸಬಲೀಕರಣಗೊಂಡರೆ ಕುಟುಂಬ ಅಭಿವೃದ್ಧಿಯಾಗುತ್ತದೆ. ಕೆಲಸದ ಜೊತೆಗೆ, ಕುಟುಂಬದ ನಿರ್ವಹಣೆಯ ಜೊತೆಗೆ ತಮ್ಮ ಆರೋಗ್ಯದ ಬಗ್ಗೆಯೂ ಕೂಡಾ ಹೆಚ್ಚಿನ ಕಾಳಜಿಯನ್ನು ಹೊಂದಬೇಕು. ಪರಮೇಶ್ವರಿ ಸಹಕಾರಿ ಸಂಘವು ಪ್ರತಿವರ್ಷ ತಜ್ಞ ವೈದ್ಯರಿಂದ ಮಹಿಳೆಯರ ಆರೋಗ್ಯ ತಪಾಸಣೆಯನ್ನು ಕೈಗೊಳ್ಳುತ್ತಿದೆ. ಇಂಥ ಶಿಬಿರಗಳ ಸದ್ಬಳಕೆಯನ್ನು ಮಹಿಳೆಯರು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಡಾ. ಸತೀಷ ಮಾಳಿ, ಡಾ. ನಿಖಿಲ ಡುಮ್ಮನ್ನವರ, ಡಾ. ರಂಜನಾ ಮಾಳಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಿಳೆಯರಿಗಾಗಿ ಹಮ್ಮಿಕೊಂಡ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಪ್ರತಿಭಾ ಬಾವಲತ್ತಿ, ಶಶಿಕಲಾ ಜಿಗಜಿನ್ನಿ, ವಾಣಿಶ್ರೀ ಹೂಲಿ, ಪವಿತ್ರಾ ತುಕ್ಕನ್ನವರ, ಲಕ್ಷ್ಮಿ ಕಾಡದೇವರ, ಶೋಭಾ ಬಾವಲತ್ತಿ , ನಂದಾ ಕೊಕಟನೂರ, ಶಾಂತಾ ಮಂಡಿ, ಶಾಂತಾ ಸೋರಗಾಂವಿ, ಅಶ್ವಿನಿ ಪಿಟಗಿ, ವೀಣಾ ಬಾಗಲಕೋಟ, ಗೌರಿ ಮಿಳ್ಳಿ , ಸವಿತಾ ಹೊಸೂರ, ಲಕ್ಷ್ಮಿ ಟೊಪಗಿ, ಶ್ರೀದೇವಿ ಬಾವಲತ್ತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಈ ಭಾಗದ ಜನರ ಬಹುದಿನಗಳ ಬೇಡಿಕೆ ಇಡೇರಿಕೆ ತಾಳಿಕೋಟೆಗೆ ನ್ಯಾಯಾಲಯ ಪ್ರಾರಂಬಿಸಲು ಆದೇಶ!

**ತಾಳಿಕೋಟೆ :** ತಾಳಿಕೋಟೆ ತಾಲೂಕಿಗೆ ಸಂಬಂದಿಸಿ ಪ್ರತ್ಯೇಕ ನ್ಯಾಯಾಲಯವಾಗಬೇಕೆಂಬ ಈ ಭಾಗದ ಜನರ ಕನಸ್ಸು ನನಸಾಗುವ ಕಾಲ ಕೂಡಿ ಬಂದಿದ್ದು ತಾಳಿಕೋಟೆ ಪಟ್ಟಣದಲ್ಲಿ ಕೂಡಲೇ ನ್ಯಾಯಾಲಯ ಪ್ರಾರಂಬಿಸಲು ಬೆಂಗಳೂರಿನ ಉಚ್ಚನ್ಯಾಯಾಲಯವು ಮಾರ್ಚ 6 ರಂದು ಆದೇಶ ಹೊರಡಿಸಿದೆ ಎಂದು ಬಾರ ಅಸೋಶೇಷನ್ ಅಧ್ಯಕ್ಷ ನ್ಯಾಯವಾದಿ ಎಸ್.ಎಸ್.ಮಾಲಗತ್ತಿ ಅವರು ತಿಳಿಸಿದ್ದಾರೆ. ತಾಳಿಕೋಟೆ ಪಟ್ಟಣದಲ್ಲಿ ನ್ಯಾಯಾಲಯವನ್ನು ಪ್ರಾರಂಬಿಸುವದರೊಂದಿಗೆ ವಾರದಲ್ಲಿ 3 ದಿನ ಅಂದರೆ ಗುರುವಾರ, ಶುಕ್ರವಾರ ಮತ್ತು ಶನಿವಾರರಂದು ತಾಳಿಕೋಟೆ ಪಟ್ಟಣದ ನೂತನವಾಗಿ ಪ್ರಾರಂಬಿಸಲಾಗುವ ನ್ಯಾಯಾಲಯದಲ್ಲಿಯೇ ಆ ಭಾಗಕ್ಕೆ ಸಂಬಂದಿಸಿದ ಕೇಸ್‌ಗಳನ್ನು ವಿಚಾರಣೆ ನಡೆಸಲು ಮುದ್ದೇಬಿಹಾಳ ಸಿವ್ಹಿಲ್ ಜಡ್ಜ ಮತ್ತು ಜೆಎಂಎಫ್‌ಸಿ ಮುದ್ದೇಬಿಹಾಳ ಇವರಿಗೆ ಉಚ್ಚನ್ಯಾಯಾಲಯದ ರಜಿಸ್ಟರ್ ಜನರಲ್ ಕೆ.ಎಸ್.ಭರತಕುಮಾರ ಅವರು ಸೂಚನೆಯನ್ನು ನೀಡಿದ್ದಾರೆಂದು ನ್ಯಾಯವಾದಿ ಎಸ್.ಎಸ್. ಮಾಲಗತ್ತಿ ಅವರು ತಿಳಿಸಿದ್ದಾರೆ.

# ಬೇಸಿಗೆಯ ಬೇಗೆ ನೀಗುವುದು ಹೇಗೆ..?

ಈ ಪ್ರಕೃತಿಯ ಬದಲಾವಣೆಯ ಪ್ರತಿಕಾಲಗಳಿಗೆ ಭೂಮಿಯ ಪ್ರತಿ ಜೀವಿಯು ಹೊಂದಿಕೊಂಡು ನಡೆಯಬೇಕಿರುವುದು ಅನಿವಾರ್ಯ ಹಾಗೂ ನಿಯಮವು ಕೂಡ.ಅಂತೆಯೇ ಪರಿಸರದಲ್ಲಿ ಉಂಟಾಗುವ ಪ್ರಮುಖ ಮೂರು ಕಾಲಗಳಾದ ಚಳಿಗಾಲ,ಬೇಸಿಗೆಗಾಲ, ಹಾಗೂ ಮಳೆಗಾಲಗಳಿಗೆ ಅನುಗುಣವಾಗಿ ಮನುಷ್ಯರಾದ ನಾವುಗಳು ಕೂಡ ಹೊಂದಿಕೊಂಡು ನಮ್ಮ ದೇಹ ಹಾಗೂ ಮಾನಸಿಕ ಸ್ವಾಸ್ಥ್ಯದ ಕಡೆಗೆ ಗಮನಹರಿಸುವುದು ಅವಶ್ಯಕವಾಗಿದೆ.

ಅಲ್ಲದೆ ಇತ್ತೀಚಿಗೆ ಜಾಗತಿಕ ತಾಪಮಾನವು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತದೆ ಇವೆಲ್ಲವೂ ಮಾನವನ ಅತಿಯಾದ ಆಸೆ ಹಾಗೂ ಪರಿಸರದ ದುರುಪಯೋಗದ ಕೆಲಸವು ನಿರಂತರವಾಗಿ ನಡೆಯುವುದರ ಪರಿಣಾಮವಾಗಿದೆ. ಹಾಗಾಗಿ ನಾವು ಮೊಟ್ಟಮೊದಲಿಗೆ ಪರಿಸರ ರಕ್ಷಣಾ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು ಮಾಲಿನ್ಯಕಾರಕ ಸಂಗತಿಗಳ ನಿಯಂತ್ರಣ ಕಾರ್ಯ ಜರೂರು ನಡೆಯಬೇಕು ಸಾಕಷ್ಟು ಪ್ರಮಾಣದಲ್ಲಿ ಮರ ಗಿಡಗಳನ್ನು ಬೆಳೆಸಬೇಕು, ಕಾಡಿನ ನಾಶವನ್ನು ತಡೆಯಬೇಕು, ಪರಿಸರ ಕಾಳಜಿಯ ಕುರಿತು ಪ್ರತಿಯೊಬ್ಬರು ಜಾಗೃತರಾಗಬೇಕು.

ಬೇಸಿಗೆಕಾಲದಲ್ಲಿ ನಮ್ಮಗಳ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ತಿಳಿಯೋಣ ಬೇಸಿಗೆ ಕಾಲದಲ್ಲಿ ತಾಪಮಾನವು ಜಾಸ್ತಿಯಾಗಿ ಜಗತ್ತನ್ನು ಬೆಳಗುತ್ತಿರುವ ಸೂರ್ಯನು ನಮ್ಮನ್ನು ಸಂಪೂರ್ಣವಾಗಿ ಬೆವರುವಂತೆ ಮಾಡುತ್ತಾನೆ.ಆ ಸಮಯದಲ್ಲಿ (ಬೇಸಿಗೆಕಾಲದಲ್ಲಿ) ನಮ್ಮ ದೇಹಕ್ಕೆ ಅಗತ್ಯವಾದ ನೀರಿನಂಶ ಸಿಗದೇ ಇದ್ದರೆ ನಿರ್ಜಲೀಕರಣ ಅಥವಾ ಡಿಹೈಡ್ರೇಶನ್ ಸಮಸ್ಯೆ ಪ್ರಾರಂಭವಾಗುತ್ತದೆ. ನಿಶ್ಯಕ್ತಿಯು ಕೂಡ ಡಿ ಹೈಡ್ರೇಶನ್ ಸಮಸ್ಯೆ ಒಂದು ಲಕ್ಷಣ ಇದನ್ನು ಕಡೆಗಣಿಸಿದರೆ ನಾವು ಅನಾರೋಗ್ಯಕ್ಕೆ ತುತ್ತಾಗುತ್ತೇವೆ.






ಆದ್ದರಿಂದ ಬೇಸಿಗೆಕಾಲದಲ್ಲಿ ನಮ್ಮಗಳ ಆಹಾರ ಪದ್ಧತಿ,ಉಡುಪುಗಳ ನಿಯಮ,ಚರ್ಮದ ರಕ್ಷಣೆ ಹಾಗೂ ದೈಹಿಕ ಮಾನಸಿಕ ಸ್ವಾಸ್ಥ್ಯದ ಕಡೆಗೆ ಹೆಚ್ಚು ಗಮನ ಹರಿಸಬೇಕಾಗಿದೆ

**ಆಹಾರ ಪದ್ಧತಿ :**

ಬೇಸಿಗೆಕಾಲದ ತೀಕ್ಷ್ಣವಾದ ಬಿಸಿಲಿನಿಂದಾಗಿ ಶರೀರದಲ್ಲಿ ವಾತ ವೃದ್ಧಿಯಾಗುತ್ತದೆ ಜೀರ್ಣ ಶಕ್ತಿ (ಅಗ್ನಿ) ದುರ್ಬಲವಾಗುತ್ತದೆ . ಹಾಗಾಗಿ ಹಿರಿಯರು ನಮಗೆ ಅಗ್ನಿಯನ್ನು ವೃದ್ಧಿಪಡಿಸುವ, ಶರೀರಕ್ಕೆ ತಂಪನ್ನು ಮತ್ತು ಬಲವನ್ನು ಕೊಡುವ ಆಹಾರ ಪಾನೀಯಗಳನ್ನು ಸೂಚಿಸುತ್ತಾರೆ.

**1. ಆಹಾರ**

ನಾವು ಬಳಸುವ ಪದಾರ್ಥಗಳು ಜೀರ್ಣಕ್ಕೆ ಲಘುವಾಗಿದ್ದು ಸ್ವತಹ ಜೀರ್ಣಕ್ರಿಯೆಯನ್ನು ಹೆಚ್ಚಿಸುವಂತಿರಬೇಕು.

* ಹಳೆಯ ಅಕ್ಕಿ ಗೋಧಿಯ ಪದಾರ್ಥಗಳು ಹಾಗೂ ಮೆಂತೆವನ್ನು ಊಟದಲ್ಲಿ ಸಾಕಷ್ಟು ಬಳಸಬೇಕು
* ಬೇಳೆ ಕಾಳುಗಳು ಹಾಗೂ ಗಟ್ಟಿ ಕಾಳುಗಳ ಬಳಕೆ ಮಿತವಾಗಿರಲಿ, ಬಳಸುವಾಗ ಸ್ವಲ್ಪ ತುಪ್ಪವನ್ನು ಸೇರಿಸಿ ಸಂಸ್ಕರಿಸಿ ಬಳಸಬೇಕು.
* ಕೊತ್ತಂಬರಿ ಕರಿಬೇವು , ದಂಟಿನ ಸೊಪ್ಪು ಹರಿವೇಸೊಪ್ಪು ಪಾಲಕ ಮೂಲಂಗಿ ಇತ್ಯಾದಿ ಸೊಪ್ಪುಗಳ ಬಳಕೆ ಯಥೇಚ್ಛವಾಗಿರಲಿ.
* ಪ್ರಾಣಿಜನ್ಯ ಆಹಾರಗಳಾದ ಹಾಲು ಮೊಸರು ಮಜ್ಜಿಗೆ ಬೆಣ್ಣೆ ತುಪ್ಪ ಇವುಗಳ ಬಳಕೆ ಇರಲಿ, ಅತೀ ಹುಳಿಯಾದ ವಸ್ತುಗಳ ಬಳಕೆ ವರ್ಜ್ಯ.
* ಸೌತೆಕಾಯಿ ಮೂಲಂಗಿ ಟೊಮೆಟೊ ಲಿಂಬೆಹಣ್ಣು ಆದಷ್ಟು ನೀರಿನಂಶ ಹಾಗೂ ಫೈಬರ್ ಅಂಶಗಳು ಹೆಚ್ಚಿರುವ ತರಕಾರಿಗಳ ಸೇವನೆ ಅವಶ್ಯಕ.
* ಗಟ್ಟಿ ಆಹಾರಗಳಾದ ಮಾಂಸ ಹಾಗೂ ಕಾಳುಗಳ ಬಳಕೆಯನ್ನು ಕಡಿಮೆ ಮಾಡಬೇಕು.
* ಈ ಸಮಯದಲ್ಲಿ ಮದ್ಯಪಾನ ಧೂಮ್ರಪಾನಗಳನ್ನು ಕಡ್ಡಾಯವಾಗಿ ಬಿಡಬೇಕು.
* ತಿನ್ನುವ ಆಹಾರವು ಸೌಮ್ಯವಾಗಿದ್ದು ಹೆಚ್ಚು ಮಸಾಲೆಯುಕ್ತವಾಗಿರದೆ ಲಘು ಉಪ್ಪು ಹುಳಿ ಕಾರಗಳನ್ನು ಒಳಗೊಂಡಿರಲಿ .
* ಬೇಸಿಗೆ ಸಮಯದಲ್ಲಿ ಬೀದಿ ಬದಿಯ ತಿಂಡಿಗಳು ಹಾಗೂ ಕರಿದ ಪದಾರ್ಥಗಳನ್ನು ತಿನ್ನಲೇಬಾರದು.
* ಆದಷ್ಟು ಹೆಚ್ಚು ನೀರಿನಂಶ ಹಾಗೂ ವಿಟಮಿನ್ "ಸಿ" ಅಂಶಗಳನ್ನು ಹೊಂದಿರುವ ಹಣ್ಣುಗಳ ಸೇವನೆ ಮಾಡಬೇಕು ಉದಾಹರಣೆಗೆ...ಕಲ್ಲಂಗಡಿ ದ್ರಾಕ್ಷಿ ಹಣ್ಣು, ಕರ್ಬೂಜ ಮೋಸಂಬಿ ಮಾವು ಕಬ್ಬಿನರಸ ಎಳನೀರು ಕಿತ್ತಳೆ ಹಾಗೂ ಲಿಂಬೆ ಹಣ್ಣುಗಳ ಬಳಕೆ ಹೆಚ್ಚಾಗಿರಲಿ.
* ಇದೆಲ್ಲಕ್ಕಿಂತ ಮುಖ್ಯವಾಗಿ ನಾವು ಬೇಸಿಗೆಕಾಲದಲ್ಲಿ ಯಥೇಚ್ಛವಾಗಿ ನೀರು ಕುಡಿಯಬೇಕು ಕನಿಷ್ಠ ನಾಲ್ಕರಿಂದ ಐದು ಲೀಟರ್ ನೀರನ್ನು ಕಡ್ಡಾಯವಾಗಿ ಕುಡಿಯಲೇಬೇಕು.

**2. ಚರ್ಮದ ರಕ್ಷಣೆ**

* ಬೇಸಿಗೆ ಕಾಲದಲ್ಲಿ ಹೊರ ಹೋಗುವಾಗ ಆದಷ್ಟು ಪೂರ್ಣ ದೇಹ ಮುಚ್ಚುವ ಬಟ್ಟೆಗಳನ್ನು ಧರಿಸುವುದು ಉತ್ತಮ ಇದರಿಂದ ಚರ್ಮದ ಮೇಲಾಗುವ ತುರಿಕೆ ಅಂತಹ ಅಲರ್ಜಿಯನ್ನು ತಡೆಯಬಹುದು.
* ನೀವು ಧರಿಸುವ ಬಟ್ಟೆಗಳು ಹತ್ತಿ ಬಟ್ಟೆಗಳು ಹಾಗೂ ತಿಳಿ ಬಣ್ಣಗಳಿಂದ ಕೂಡಿದ ಧೀರಿಸುಗಳಾಗಿರಲಿ.
* ದಿನಾಲು ಎರಡು ಬಾರಿ ತಣ್ಣೀರಿನ ಸ್ನಾನ ದೇಹಕ್ಕೆ ಹಿತಕರವೆನಿಸುವುದು.
* ಸುಗಂಧ ಲೇಪನಗಳು ಮಿತವಾಗಿರಲಿ.
* ಅತಿಯಾದ ರಾಸಾಯನಿಕ ಒಳಗೊಂಡ ಸೌಂದರ್ಯವರ್ಧಕಗಳ ಬಳಕೆಯು ಬೇಡ ಮಲಗುವ ಮುಂಚೆ ಸ್ವಲ್ಪ ತೆಂಗಿನ ಎಣ್ಣೆಯ ಲೇಪನ ಚರ್ಮಕ್ಕೆ ಒಳ್ಳೆಯದು.
* ಸನ್ಸ್ಕ್ರೀನ್ ಲೋಶನ್ ಗಳನ್ನು ಹೊರ ಹೋಗುವಾಗ ಕಡ್ಡಾಯವಾಗಿ ಚರ್ಮಕ್ಕೆ ಲೇಪನ ಮಾಡಬೇಕು.

**3. ದೈಹಿಕ-ಮಾನಸಿಕ ಸ್ವಾಸ್ಥ್ಯ**

* ಬಿಸಿಲು ಪ್ರಕರವಾಗಿರುವ ಮಧ್ಯಾಹ್ನ ಸಮಯದಲ್ಲಿ ಹೆಚ್ಚು ಕೆಲಸಗಳನ್ನು ಮಾಡಬಾರದು.
* ಬಿಡುವಿಲ್ಲದ ಕೆಲಸ ಮಾಡದೆ ಕೆಲಸದ ಮಧ್ಯದಲ್ಲಿ ಸ್ವಲ್ಪ ಲಘು ವಿಶ್ರಾಂತಿ ಪಡೆಯಬೇಕು.
* ಕೆಲಸದ ಮಧ್ಯದಲ್ಲಿ ಹೆಚ್ಚು ನೀರನ್ನು ಕುಡಿಯಬೇಕು.
* ಹೊರಗೆ ಕೆಲಸ ಮಾಡುವಾಗ ತಲೆಗವಸು ಬಳಕೆ ಸೂಕ್ತ ಇದರಿಂದ ತಲೆನೋವು ಬರುವುದನ್ನು ತಪ್ಪಿಸಬಹುದು.
* ಮೊಬೈಲ್ ಕಂಪ್ಯೂಟರ್ ಗಳ ಬಳಕೆ ಮಿತವಾಗಿರಲಿ ಇಲ್ಲದಿದ್ದರೆ ಕಣ್ಣು ಉರಿ ಹಾಗೂ ಮೈಗ್ರೇನ್ (ತಲೆನೋವು) ಬರುವ ಸಾಧ್ಯತೆ ಹೆಚ್ಚು
* ಬೇಸಿಗೆಯ ಅವಧಿಯಲ್ಲಿ ಧ್ಯಾನ ಏಕಾಂತ ಹಾಗೂ ಲಘು ಸಂಗೀತಗಳನ್ನ ಕೇಳಬೇಕು.
* ದಿನದ ಸ್ವಲ್ಪ ಸಮಯ ನಾವು ಒಳ್ಳೆಯ ಪುಸ್ತಕಗಳನ್ನು ಓದುವುದರೊಂದಿಗೆ ನಮ್ಮ ಮನಸ್ಸನ್ನು ಶಾಂತ ಗೊಳಿಸಬಹುದು.

ಈ ರೀತಿಯಾಗಿ ನಾವು ಬೇಸಿಗೆಕಾಲದಲ್ಲಿ ಉಂಟಾಗುವ ಸಮಸ್ಯೆಗಳನ್ನು ನಿಯಂತ್ರಿಸಬಹುದಾಗಿದೆ ಸ್ವಲ್ಪ ನಮ್ಮ ಜೀವನದ ದಿನಚರಿಯ ಬದಲಾವಣೆಗಳನ್ನು ಈ ಅವಧಿಯಲ್ಲಿ ಮಾಡಿದ್ದೇ ಆದರೇ ! ನಮ್ಮ ದೈಹಿಕ ಮಾನಸಿಕ ಸ್ವಾಸ್ಥ್ಯದ ಜೊತೆಗೆ ಆರೋಗ್ಯ ವೃದ್ಧಿಯನ್ನು ಮಾಡಿಕೊಳ್ಳಬಹುದಾಗಿದೆ.



- ಅಶ್ವಿನಿ ಅಂಗಡಿ
ಶಿಕ್ಷಕಿ ಹಾಗೂ ಲೇಖಕಿ.
ಬದಾಮಿ.

# ಕೊಪ್ಪಳ ನಗರಸಭೆ: ಕನ್ನಡ ಭಾಷೆ ನಾಮಫಲಕಗಳ ಅಳವಡಿಕೆಗೆ ಸೂಚನೆ

**ಕೊಪ್ಪಳ :** ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿ, ಮುಂಗಟ್ಟುಗಳ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆ ಬಳಸಬೇಕು. ಕರ್ನಾಟಕ ಸರ್ಕಾರದ ಅಧಿಸೂಚನೆ ಕನ್ನಡ ಭಾಷಾ ಅಭಿವೃದ್ಧಿ ಅಧಿನಿಯಮ 2023ರನ್ವಯ ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿ ವ್ಯಾಪಾರ, ಉದ್ದಿಮೆ ಹಾಗೂ ಇತರೆ ವಹಿವಾಟು ನಡೆಸುವ ಮಾಲೀಕರು ತಮ್ಮ ಎಲ್ಲಾ ಅಂಗಡಿ ಮುಂಗಟ್ಟು,ಹೋಟೆಲ್‌ಗಳು, ವ್ಯವಹಾರ ಉದ್ದಿಮೆಗಳು, ಟ್ರಸ್ಟ್‌ಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗ ಶಾಲೆಗಳು ಹಾಗೂ ಮನೋರಂಜನಾ ಕೇಂದ್ರಗಳು ಸೇರಿದಂತೆ ಇವುಗಳ ಮೇಲೆ ಪ್ರದರ್ಶಿಸುವ ನಾಮಫಲಕಗಳಲ್ಲಿ ಕನ್ನಡ ಭಾಷೆಯು ಶೇ.60 ರಷ್ಟಿರಬೇಕು ಹಾಗೂ ಕನ್ನಡ ಭಾಷೆಯು ನಾಮಫಲಕದ ಮೇಲ್ಭಾಗದಲ್ಲಿರಬೇಕು. ಸರ್ಕಾರದ ಅಧಿಸೂಚನೆಯನ್ನು ಎಲ್ಲ ವ್ಯಾಪಾರಸ್ಥರು ಕಡ್ಡಾಯವಾಗಿ ಪಾಲಿಸಬೇಕು.

ಯಾವುದೇ ವ್ಯಾಪಾರಸ್ಥರ ನಾಮಫಲಕಗಳು ಶೇ.60ರಷ್ಟು ಕನ್ನಡ ಭಾಷೆಯಲ್ಲಿ ಇರದಿದ್ದರೆ ಅಂತಹ ನಾಮಫಲಕಗಳನ್ನು 7 ದಿನಗೊಳಗಾಗಿ ಬದಲಾಯಿಸಬೇಕು. ತಪ್ಪಿದಲ್ಲಿ ನಗರಸಭೆ/ಪುರಸಭೆ ಕಾಯ್ದೆಯ ಪ್ರಕಾರ ನಾಮಫಲಕಗಳನ್ನು ತೆರವುಗೊಳಿಸಿ ದಂಡ ವಿಧಿಸಲಾಗುವುದು ಎಂದು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಅರ್ಜಿ

**ಬಾಗಲಕೋಟೆ :** ಮೀನುಗಾರಿಕೆ ಇಲಾಖೆಯಿಂದ ಪ್ರಸಕ್ತ ಸಾಲಿಗೆ ಪ್ರಧಾನಮಂತ್ರಿ ಮತ್ಸ್ಯವಾಹಿನಿ ಯೋಜನೆಯಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಚಲಿಸಬಲ್ಲ ಪರಿಸರ ಸ್ನೇಹಿ ಕಿಯೋಸ್ಕ ಮೀನು ಮಾರಾಟಕ್ಕಾಗಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಸಾಮಾನ್ಯ ಅಭ್ಯರ್ಥಿಗಳು 1 ಲಕ್ಷ, ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳಾ ಅಭ್ಯರ್ಥಿಗಳು 50 ಸಾವಿರ ರೂ.ಗಳ ಭದ್ರತಾ ಠೇವಣಿ ನೀಡಿ ಮಾಸಿಕ 3 ಸಾವಿರ ರೂ. ಬಾಡಿಗೆ ಆಧಾರದ ಮೇಲೆ ನೀಡಲಾಗುವುದು. ಆಸಕ್ತ ಮೀನುಗಾರರು, ಮೀನುಗಾರರ ಸಹಕಾರ ಸಂಘಗಳು, ಮೀನುಗಾರ ರೈತ ಉತ್ಪಾದಕರ ಸಂಘಗಳು ಮಾರ್ಚ 25 ರೊಳಗಾಗಿ ಮೀನುಗಾರಿಗೆ ಸಹಾಯಕ ನಿರ್ದೇಶಕರು ಬಾದಾಮಿ (8095303104) ಮತ್ತು ಜಮಖಂಡಿ (7411121617) ಇವರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

# ಕನ್ನಡ ನಾಮಫಲಕ ಅಳವಡಿಕೆ ಕಡ್ಡಾಯ

**ಬಾಗಲಕೋಟೆ :** ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಬರುವ ಉದ್ದಿಮೆದಾರರು ವಾಣಿಜ್ಯ. ಕೈಗಾರಿಕೆ ಮತ್ತು ವ್ಯವಹಾರ ಉದ್ಯಮಗಳು, ಟ್ರಸ್ಟಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಕಿರಾಣಿ ಸ್ಟೋರ್ಸ, ಹೋಟೆಲ್, ಬಾರ್, ರೆಸ್ಟೋರೆಂಟ್, ಲಾಡ್ಜ ಇತ್ಯಾದಿ ಟ್ರೇಡರದಾರರು ತಮ್ಮ ಅಂಗಡಿ ಮೇಲೆ ಬಳಸುವ ನಾಮಫಲಕವನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ 2024ರ ಕಲಂ 3ರ ಅಡಿಯಲ್ಲಿ ಕಡ್ಡಾಯವಾಗಿ ಕನ್ನಡದಲ್ಲಿ ಶೇ.60ಕ್ಕಿಂತ ಹೆಚ್ಚಿಗೆ ಅಳವಡಿಸತಕ್ಕದ್ದು. ಕನ್ನಡ ಭಾಷೆಯ ನಾಮಫಲಕದ ಮೇಲ್ಭಾಗದಲ್ಲಿ ಪ್ರದರ್ಶಿಸುಬೇಕು. ತಪ್ಪಿದಲ್ಲಿ ಪುರಸಭೆ 1964ರ ನಿಯಮ 257ರ ಪ್ರಕಾರ ಕ್ರಮ ಜರುಗಿಸಲಾಗುವುದೆಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಸವಾ ಎಜ್ಯುಕೇಶನ್ ಶಾಲೆಯಲ್ಲಿ ಮಹಿಳಾ ದಿನಾಚರಣೆ




ರಬಕವಿ : ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್, ರಬಕವಿ ಭಾರತ ಗ್ಯಾಸ್ ಮತ್ತು ಬಸವ ಎಜ್ಯುಕೇಶನ್ ಫೌಂಡೇಶನ್ ಇವರ ಸಂಂ-ಯುಕ್ತ ಆಶ್ರಯದಲ್ಲಿ ಡಿ. ಕೆ. ಕೊಟ್ರಶೆಟ್ಟಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ತ್ರೀಯರ ಏಳ್ಗೆಗೋಸ್ಕರ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ 9 ನೇ ತರಗತಿಯ ವಿದ್ಯಾರ್ಥಿ ರಾಹುಲ್ ಹುಡೇದವರ ಹಾಗೂ ಸಂಗಡಿಗರಿಂದ ಪ್ರಾರ್ಥನೆ ಜರುಗಿ-ತು. ಸಮಾಂಭದ ಅತಿಥಿ ಸ್ಥಾನವನ್ನು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಸ್ವಪ್ನಾ ಆನಿಗೋಳ ವಹಿಸಿಕೊಂಡಿದ್ದರು. ಸ್ತ್ರೀ ಎಂದರೆ ಯಾರು? ಸ್ತ್ರೀಯ ಮಹತ್ವವನ್ನು, ಸ್ತ್ರೀಯನ್ನು ಭೂಮಿತಾಯಿ ಎಂದು ಏಕೆ ಕರೆಯುತ್ತಾರೆ, ಹಾಗೆಯೇ ತಂದೆ-ತಾಯಿಯ ಮೌಲ್ಯವನ್ನು ಪ್ರಯೋಗಗಳ ಮೂಲಕ ಮಕ್ಕಳಿಗೆ ತಿಳಿ ಹೇಳಿದರು.

ಜೊತೆಗೆ ಹೆಣ್ಣುಮಕ್ಕಳು ಶಿಕ್ಷಕರಾದರೆ ಹೇಗಿರಬೇಕೆಂದು ಹಲವಾರು ವಿಷಯವನ್ನು ಮಾರ್ಮಿಕವಾಗಿ ತಿಳಿಸಿದರು. ಬಸವ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಸೋಮಶೇಖರ ಡಿ. ಕೊಟ್ರಶೆಟ್ಟಿ , ಕರ್ನಾಟಕ ಬ್ಯಾಂಕಿನ ನಿವೃತ್ತ ಅಧಿಕಾರಿ ರೇವಣ್ಣ ಉಮದಿ, ಶಿಲ್ಪಾ ಜಿ. ಪಿಶೆ, ಶಿಲ್ಪಾ ಜಿ. ಮುತ್ತೂರ, ಡಾ. ಜ್ಯೋತಿ ಜಿ. ಚಿತ್ತರಗಿ, ಸ್ಮಿತಾ ಎ. ನಾಶಿ ಪಾಲ್ಗೊಂಡಿದ್ದರು. ಶಾಲೆಯ ಮುಖ್ಯೋಪಾಧ್ಯಾಯ ಪ್ರಶಾಂತ್ ಬಳ್ಳೂರ ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿದರು.

## ಗಂಗಾವತಿ: ಹರಿಗೋಲು ವಶಕ್ಕೆ ಪಡೆದ ಅರಣ್ಯ ಇಲಾಖೆ

**ಗಂಗಾವತಿ :** ತಾಲ್ಲೂಕಿನ ಸಾಣಾಪುರ ಗ್ರಾಮದ ಕೆರೆಯಲ್ಲಿ ಕಾನೂನು ಬಾಹಿರವಾಗಿ ಹರಿಗೋಲು ಹಾಕುತ್ತಿರುವ ಮಾಹಿತಿಯನ್ವಯ ಬುಧವಾರ ಬೆಳಿಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಕೆರೆ ಬಳಿ ಕಾರ್ಯಾಚರಣೆ ನಡೆಸಿ ಹರಿಗೋಲು ವಶಕ್ಕೆ ಪಡೆದಿದ್ದಾರೆ.

ಸಾಣಾಪುರ ಗ್ರಾಮಸ್ಥರು ವಾಟರ್ ಫಾಲ್ ಮತ್ತು ಕೆರೆಯಲ್ಲಿ ಅಕ್ರಮವಾಗಿ ಹರಿಗೋಲು ಹಾಕಿ ಪ್ರವಾಸಿಗರಿಂದ ಅಧಿಕ ಹಣ ವಸೂಲಿ ಮಾಡುತ್ತಿದ್ದ ಬಗ್ಗೆ ವ್ಯಾಪಕ ದೂರುಗಳಿದ್ದವು.

ಈ ಕುರಿತು ಜ. 5ರಂದು ಪ್ರಜಾವಾಣಿಯಲ್ಲಿ ವರದಿ ಪ್ರಕಟವಾದ ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು ಹರಿಗೋಲುಗಳನ್ನು ವಶಕ್ಕೆ ಪಡೆದಿದ್ದರು. ಬಳಿಕ ಶಾಸಕ ಜನಾರ್ದನ ರೆಡ್ಡಿ ಸೂಚನೆ ಮೇರೆಗೆ ಹರಿಗೋಲು ಹಾಕಲು ಅವಕಾಶ ಕಲ್ಪಿಸಲಾಗಿತ್ತು. ಅಷ್ಟೇ ಅಲ್ಲ; ಸ್ವತಃ ಶಾಸಕರೇ ಕುಟುಂಬ ಸಮೇತ ಸಾಣಾಪುರ ಕೆರೆಯಲ್ಲಿ ಹರಿಗೋಲು ಸವಾರಿಗೆ ಚಾಲನೆ ಕೊಟ್ಟಿದ್ದರು.

ಮೊದಲಿಗೆ 15 ಜನ ಹರಿಗೋಲು ಮಾಲೀಕರಿಗೆ ಪರವಾನಗಿ ನೀಡುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದು, ಸಾಣಾಪುರ ಗ್ರಾಮದಲ್ಲಿ ಎಲ್ಲರಿಗೂ ಅನುಮತಿ ನೀಡಬೇಕು ಎಂದು ದುಂಬಾಲು ಬಿದ್ದಿದ್ದರು. ಅಧಿಕಾರಿಗಳು ಪರವಾನಗಿ ನೀಡುವ ಭರವಸೆ ನೀಡಿದ್ದರೂ ಅಕ್ರಮವಾಗಿ ಹರಿಗೋಲು ಹಾಕಲಾಗುತ್ತಿತ್ತು. ಈಗ ಅರಣ್ಯ ಇಲಾಖೆಯವರೇ ಜಪ್ತಿ ಮಾಡಿದ್ದಾರೆ.

'ಹರಿಗೋಲು ಹಾಕಬೇಡಿ ಎಂದು ಮಾಲಿಕರಿಗೆ ಹಲವು ಬಾರಿ ತಿಳಿಸಲಾಗಿದೆ. ಆದರೂ ಕಣ್ಣುತಪ್ಪಿಸಿ ಹಾಕುತ್ತಿರುವ ಬಗ್ಗೆ ಮಾಹಿತಿ ಬಂದ ಕಾರಣ 20ಕ್ಕೂ ಹೆಚ್ಚು ಹರಿಗೋಲುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಗಂಗಾವತಿ ವಲಯ ಅರಣ್ಯ ಅಧಿಕಾರಿ ಸುಭಾಷ್ ಚಂದ್ರ ನಾಯಕ್ ತಿಳಿಸಿದ್ದಾರೆ.

## ಲಖಪತಿ ದೀದಿ-ಸಂವಾದ ಕಾರ್ಯಕ್ರಮಕ್ಕೆ ಝೂನ್ಸಿ ಲಕ್ಷ್ಮೀ ಹೂಗಾರ್





**ಧಾರವಾಡ :** ದೇಶದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಕನಸಿನ ಸ್ವಾವಲಂಬಿ ಮಹಿಳೆಯರ "ಲಖಪತಿ ದೀದಿ" ಎಂಬ ಸಂವಾದ ಕಾರ್ಯಕ್ರಮಕ್ಕೆ ಧಾರವಾಡ ಜಿಲ್ಲೆಯ ಉಪ್ಪಿನ ಬೆಟಗೇರಿ ಗ್ರಾಮದ ವಿಶ್ವ ಪ್ರೇರಣಾ ಸ್ವಸಹಾಯಸಂಘದಸದಸ್ಯೆಯಾದ ಶ್ರೀಮತಿ ಝೂನ್ಸಿ ಲಕ್ಷ್ಮೀ ಪ್ರಕಾಶ್ ಹೂಗಾರ ಇವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೆಹಲಿಯಲ್ಲಿ ಜರಗುವ ಸಂವಾದ ಕಾರ್ಯಕ್ರಮಕ್ಕೆ ಆಯ್ಕೆ ಆಗಿರುವುದು ಧಾರವಾಡ ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ.

ಧಾರವಾಡ ಜಿಲ್ಲೆಯ ಉಪ್ಪಿನ ಬೆಟಗೇರಿ ಗ್ರಾಮದ ಪದವೀಣಧರೆ ಶ್ರೀಮತಿ ಝೂನ್ಸಿ ಲಕ್ಷ್ಮೀ ಅವರು ಸಾಂಪ್ರದಾಯಕ ಎಣ್ಣೆ ಗಾಣದಿಂದ ಶುದ್ಧ ರೂಪದಲ್ಲಿ ಎಲ್ಲ ರೀತಿಯಾದ ಎಣ್ಣೆಯನ್ನು ತಯಾರಿಸುವ ಮೂಲಕ ಸ್ವಾವಲಂಬಿತನಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡು ಗ್ರಾಮೀಣ ಪ್ರದೇಶದಲ್ಲಿದ್ದು ಇಡೀ ರಾಜ್ಯವೇ ಈ ಗ್ರಾಮದ ಕಡೆ ನೋಡುವಂತೆ ಮಾಡಿದ ಶ್ರೇಯಸ್ಸು - ಝೂನ್ಸಿ ಲಕ್ಷ್ಮೀಅವರಿಗೆಸಲ್ಲುತ್ತದೆ.ಲಖಪತಿ ದೀದಿ ಕಾರ್ಯಕ್ರಮಕ್ಕೆ ಆಯ್ಕೆ ಆದ ಶ್ರೀಮತಿ ಝೂನ್ಸಿಲಕ್ಷ್ಮೀ ಹೂಗಾರ ಅವರಿಗೆ ಶ್ರೀ ಶಿವ ಚಿದಂಬರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಚಿದಂಬರ.ಪಿ.ನಿಂಬರಗಿಯವರು ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಮಕ್ಕಳ ಸಂತೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕ

**ರಬಕವಿ-ಬನಹಟ್ಟಿ :** ಸಂತೆ ಮೇಳ ಮಕ್ಕಳಲ್ಲಿ ಮಾರುಕಟ್ಟೆಯ ಜ್ಞಾನ, ಹಣ-ಕಾಸು ಜ್ಞಾನ, ವ್ಯವಹಾರ ಜ್ಞಾನ ಬೆಳೆಸಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಮಕ್ಕಳಲ್ಲಿ ಪಠ್ಯ ಪುಸ್ತಕದ ಜ್ಞಾನದ ಜೊತೆಗೆ ವ್ಯವಹಾರ ಜ್ಞಾನವೂ ಕೂಡ ಬಹಳ ಮುಖ್ಯ ಎಂದು ಮುಖ್ಯ ಗುರು ಚಿಕ್ಕಯ್ಯ ಬುದ್ನಿ ಅಭಿಪ್ರಾಯ ಪಟ್ಟರು. ಅವರು ಬನಹಟ್ಟಿಯ ಕೈಮಗ್ಗ ಅಭಿವೃದ್ಧಿ ನಿಗಮದ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಚಿಣ್ಣರ ಸಂತೆ ಮೇಳವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.



ಕಲಿಕೆ ಯಶಸ್ವಿಯಾಗಲು ಚಟುವಟಿಕೆಗಳು ಪೂರಕ. ಸಂತೆಸಮಯ ಕಲಿಕೆಯಿಂದ ಕೌಶಲ್ಯ, ಜ್ಞಾನ, ಬೆಳೆದು ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಾಸವಾಗಲು ಸಹಕಾರಿಯಾಗಿದೆ. ಇಂಥ ಚಟುವಟಿಕೆಗಳನ್ನು ಮತ್ತಷ್ಟು ಕೈಗೊಳ್ಳುವ ಮೂಲಕ ಮಕ್ಕಳ ಪ್ರಗತಿಗೆ ಶಿಕ್ಷಕರು ನಿರಂತರ ಪ್ರಯತ್ನ ಮಾಡಬೇಕು ಎಂದು ಕರೆ ಕೊಟ್ಟರು.

ಶಿಕ್ಷಕಿ ಶೈಲಾ ಮಿರ್ಜಿ ಮಾತನಾಡಿ ಮಕ್ಕಳಲ್ಲಿ ಬರೀ ಪುಸ್ತಕೀಯ ಜ್ಞಾನ ಬೆಳೆಸಿ ಅವರನ್ನು ಪುಸ್ತಕದ ಬದನೆಕಾಯಿ ಮಾಡುವುದು ಬೇಡ. ಇಂದಿನ ಮಕ್ಕಳು ಬಹಳ ಕ್ರಿಯಾಶೀಲರು, ಸೃಜನಶೀಲರು. ಜಗತ್ತಿನ ಸವಾಲುಗಳನ್ನು ಎದುರಿಸಲು ಅವರನ್ನು ಸಿದ್ಧಗೊಳಿಸಬೇಕು ಎಂದರು.

ಮಕ್ಕಳು ವಿವಿಧ ಬಗೆಯ ತರಕಾರಿ, ಹಣ್ಣು ಹಂಪಲು, ತೆಂಗಿನಕಾಯಿ, ತಿನಿಸುಗಳು, ಪಾಣಿಪುರಿ, ವಡಾಪಾವ್ , ಭಡಂಗ, ಮಿಸಳ, ಎಳೆನೀರು, ರಸ್ನಾ ಇತ್ಯಾದಿ ಮಾರುತ್ತಿದ್ದದ್ದು ಆಕರ್ಷಕವಾಗಿತ್ತು.

ಮಕ್ಕಳು ಗ್ರಾಹಕರನ್ನು ಕೂಗಿ ಕೂಗಿ ಕರೆಯುತ್ತಿದ್ದರು. ಅವರು ವ್ಯಾಪಾರ ಮಾಡುವುದು ವಿಶೇಷವಾಗಿತ್ತು.

ಪಾಲಕರು, ವಿವಿಧ ಶಾಲೆ ಶಿಕ್ಷಕರು, ಸಾರ್ವಜನಿಕರು ಮಕ್ಕಳಿಂದ ವಿವಿಧ ವಸ್ತುಗಳ ಖರೀದಿಯಲ್ಲಿ ತೊಡಗಿದ್ದರು.

ಶಾಲೆಯ ಎಸ್.ಡಿ.ಎಂ.ಸಿ. ಉಪಾಧ್ಯಕ್ಷ ಸದಾಶಿವ ಭಸ್ಮೆ, ಸದಸ್ಯ ಖಟಾವಕರ, ಶಿಕ್ಷಕರಾದ ಬಿ.ವಿ. ತೆಗ್ಗಿ, ಎಚ್.ಜಿ. ಜೀರಂಕಲಗಿ, ಪ್ರದೀಪ ಕರಡಿ, ಸವಿತಾ ಕಿತ್ತೂರ, ಚಂದ್ರಕಾಂತ ಜೈನಾಪುರ, ವಿದ್ಯಾ ಆಸಂಗಿ, ರಾಧಿಕಾ ಸಂಧಿಮನಿ ಉಪಸ್ಥಿತರಿದ್ದರು.

## ಇಂದು ಲೋಕ ಅದಾಲತ

**ಬೆಳಗಾವಿ :** ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಧಿಕಾರ ನಿರ್ದೇಶನ ಮೇರಿಗೆ ಮಾ.9 ರಂದು ನಡೆಯಬೇಕಿದ ಲೋಕ ಅದಾಲತನ್ನು ಮಾ.16ಕ್ಕೆ ಮುಂದುಡಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಧಿಕಾರ, ಹಿರಿಯ ಸಿವಿಲ್ ನ್ಯಾಯಾಧೀಶರು, ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಾ.ಜ.ಪ. ನಗರ ಘಟಕದ ಅಧ್ಯಕ್ಷರ ಆಯ್ಕೆ





**ರಬಕವಿ-ಬನಹಟ್ಟಿ :** ರಬಕವಿ-ಬನಹಟ್ಟಿ ನಗರ ಘಟಕದ ಬಿಜೆಪಿ ಅಧ್ಯಕ್ಷರನ್ನಾಗಿ ಮಾಜಿ ನಗರಾಧ್ಯಕ್ಷ, ನೂಲಿನ ಗಿರಣಿ ಅಧ್ಯಕ್ಷರಾದ ಶ್ರೀಶೈಲ ಬೀಳಗಿಯವರನ್ನು ಹಾಗೂ ತೇರದಾಳ ಗ್ರಾಮೀಣ ಭಾಗದ ಅಧ್ಯಕ್ಷರನ್ನಾಗಿ ಸುರೇಶ ಅಕ್ಕಿವಾಟ ಅವರನ್ನು ನೇಮಕ ಮಾಡಲಾಗಿದೆಯೆಂದು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಕಾರ್ಯಾಗಾರ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ




**ಬೆಳಗಾವಿ :** ಹತ್ತನೆ ತರಗತಿ ಎನ್ನುವುದು ವಿದ್ಯಾರ್ಥಿಗಳ ಜೀವನದಲ್ಲಿ ಮುಖ್ಯವಾದ ಸಂಗತಿ, ನಿರಂತರ ಪರಿಶ್ರಮ, ಸರಿಯಾದ ವೇಳಾಪಟ್ಟಿ, ಪರಿಣಾಮಕಾರಿ ಅಧ್ಯಯನ ಮಾಡಿ ಸಕಾರಾತ್ಮಕ ಮನೋಭಾವನೆಯಿಂದ ಹಾಗೂ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿದರೆ ಯಶಸ್ಸು ಸಾಧ್ಯವಾಗುತ್ತದೆ ಎಂದು ಶ್ರೀ ಸಿದ್ದರಾಮೇಶ್ವರ ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಸ್ವಪ್ನಾ ಜೋಶಿ ಅಭಿಪ್ರಾಯಪಟ್ಟರು. ಡಾ ಸ ಜ ನಾಗಲೋಟಿಮಠ ವಿಜ್ಞಾನ ಕೇಂದ್ರ, ಬೆಳಗಾವಿ, ಶ್ರೀ ಸಿದ್ಧರಾಮೇಶ್ವರ ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯ, ಬೆಳಗಾವಿ, ಜಯಭಾರತ ಫೌಂಢೇಶನ, ಬೆಳಗಾವಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ, ಬೆಳಗಾವಿ ಜಂಟಿಯಾಗಿ ಬೆಳಗಾವಿ ನಗರದ ಶ್ರೀ ಸಿದ್ಧರಾಮೇಶ್ವರ ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಎಸ್ ಎಸ್ ಎಲ್ ಸಿ ಮಕ್ಕಳಿಗಾಗಿ ಆಯೋಜಿಸಿದ್ದ ಪ್ರೇರಣಾ ಶಿಬಿರದಲ್ಲಿ ಉದ್ಘಾಟಕರಾಗಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೈಜಯಂತಿ ಚೌಗಲಾ ಮಾತನಾಡಿ ಪರೀಕ್ಷಾ ದಿನಗಳು ಹತ್ತಿರದಲ್ಲಿದ್ದು ವಿದ್ಯಾರ್ಥಿಗಳು ಮತ್ತು ಪಾಲಕ ಪೋಷಕರು ಒತ್ತಡದಲ್ಲಿರುತ್ತಾರೆ ಪರೀಕ್ಷಾ ಪೂರ್ವದ ಸಿದ್ಧತೆ ಗಟ್ಟಿಯಾಗಿದ್ದರೆ ಪರೀಕ್ಷೆಯು ಆತಂಕವಾಗುವುದಿಲ್ಲ ಕೇವಲ ಅಂಕಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪೋಷಕರಾಗಲಿ, ವಿದ್ಯಾರ್ಥಿಗಳಾಗಲಿ ಪರೀಕ್ಷೆಯನ್ನು ಎದುರಿಸಬಾರದು, ಅಂಕ ಗಳಿಕೆಯೇ ಮುಖ್ಯ ಎಂದು ಭಾವಿಸಬಾರದು ಎಂದರು.

ವಿಷಯ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ರಾಜ್ಯ ಶಿಕ್ಷಣ ಸಂಯೋಜಕರಾದ ಪ್ರಕಾಶ ಮಾಸ್ತಿಹೊಳಿ, ಸರಕಾರಿ ಪ್ರೌಢಶಾಲೆ ಮುದಕವಿಯ ವಿಜ್ಞಾನ ಶಿಕ್ಷಕ ವಿ ಬಿ ಹೆಗಡೆ ಯಮಕನಮರಡಿಯ ಸಿ ಇ ಎಸ್ ಪ್ರೌಢಶಾಲೆಯ ಆಂಗ್ಲಭಾಷಾ ಶಿಕ್ಷಕ ಅಜಯ ಉದೋಶಿ, ವಿಜ್ಞಾನ, ಇಂಗ್ಲಿಷ ಹಾಗೂ ಗಣಿತ ವಿಷಯಗಳಲ್ಲಿ ಉತ್ತಮ ಅಂಕ ಗಳಿಕೆ, ಹೆಚ್ಚು ಒತ್ತು ನೀಡಿ ಅಭ್ಯಾಸ ಮಾಡಬೇಕಾದ ಅಧ್ಯಾಯಗಳು, ಉತ್ತರ ಬಿಡಿಸುವಿಕೆ ಮುಂತಾದವುಗಳ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿದರು.

ಕಾರ್ಯಕ್ರಮದಲ್ಲಿ ಜಯಭಾರತ ಫೌಂಡೇಶನದ ನಿರ್ದೇಶಕರುಗಳಾದ ಬಸನಗೌಡಾ ಪಾಟೀಲ, ದಯಾನಂದ ಕದಮ, ಮಹಿಳಾ ಕಲ್ಯಾಣ ಸಂಸ್ಥೆಯ ಸಂಯೋಜಕ ಎಂ ಎಸ್ ಚೌಗಲಾ, ಸುರೇಖಾ ಪಾಟೀಲ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಕರ್ನಾಟಕ ಪಬ್ಲಿಕ ಶಾಲೆಯ ಪ್ರಾಚಾರ್ಯ ಕಿರಣ ಚೌಗಲಾ ಪ್ರಾಸ್ತಾವಿಕವಾಗಿ ಮಾತನಾಡಿದರು ಶಂಕರ ಕತ್ತಿ ನಿರೂಪಿಸಿ ವಂದಿಸಿದರು, ವಿವಿಧ ಶಾಲೆಗಳ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರೇರಣಾ ಶಿಬಿರದ ಲಾಭ ಪಡೆದುಕೊಂಡರು.

## ಆನೆಗೊಂದಿ ಉತ್ಸವ:
### ಹಗ್ಗ-ಜಗ್ಗಾಟದಲ್ಲಿ ಹೊಸಕೇರಾ ತಂಡ ಜಯ



**ಕೊಪ್ಪಳ :** ಆನೆಗೊಂದಿ ಉತ್ಸವ-2024ರ ಅಂಗವಾಗಿ ಆನೆಗೊಂದಿಯ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಮಾರ್ಚ್ 9ರಂದು ಹಮ್ಮಿಕೊಂಡಿದ್ದ ಹಗ್ಗ-ಜಗ್ಗಾಟ ಸ್ಪರ್ಧೆಯಲ್ಲಿ ಗಂಗಾವತಿ ತಾಲ್ಲೂಕಿನ ಹೊಸಕೇರಾದ ದುರ್ಗಾ ಪರಮೇಶ್ವರಿ ತಂಡವು ಜಯಗಳಿಸಿದೆ.

ವಿಜಯನಗರ ಸಾಮ್ರಾಜ್ಯದ ತೊಟ್ಟಿಲು ಆನೆಗೊಂದಿ ಉತ್ಸವ ನಿಮಿತ್ತ ಕುಸ್ತಿ, ಕಬಡ್ಡಿ, ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್ ಸೇರಿದಂತೆ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದ್ದು, ಇದರ ಭಾಗವಾಗಿ ಶನಿವಾರ ಜರುಗಿದ ಹಗ್ಗ-ಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಹೊಸಕೇರಾದ ದುರ್ಗಾ ಪರಮೇಶ್ವರಿ ತಂಡವು ಇತ್ತೀಚೆಗೆ ನಡೆದ ಕನಕಗಿರಿ ಉತ್ಸವದ ಹಗ್ಗ-ಜಗ್ಗಾಟ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿತ್ತು.

ಆನೆಗೊಂದಿ ಉತ್ಸವದ ಹಗ್ಗ-ಜಗ್ಗಾಟದಲ್ಲಿ ಕೊಪ್ಪಳದ ನಾಗರಾಜ ನೇತೃತ್ವದ ತಂಡ ದ್ವಿತೀಯ ಹಾಗೂ ಕನಕಗಿರಿಯ ತಾಲ್ಲೂಕಿನ ಹನುಮನಾಳ ತಂಡವು ತೃತೀಯ ಸ್ಥಾನ ಪಡೆದಿದ್ದು, ಈ ತಂಡಗಳಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನವನ್ನು ವಿತರಣೆ ಮಾಡಲಾಯಿತು.

## ಸಂಘಟನಾ ಕಾರ್ಯದರ್ಶಿಯಾಗಿ ನೇಮಕ

**ತಾಳಿಕೋಟೆ :** ಅಖಂಡ ಕರ್ನಾಟಕ ವೀರಶೈವ ಲಿಂಗಾಯತ ಸಮಾಜದ ಕಿತ್ತೂರ ಕರ್ನಾಟಕ ಪ್ರದೇಶ ಸಂಘಟನಾ ಕಾರ್ಯದರ್ಶಿಯಾಗಿ ತಾಳಿಕೋಟೆಯ ಬಸನಗೌಡ ಮಾಲಿಪಾಟೀಲ ಅವರನ್ನು ನೇಮಕ ಮಾಡಿ ಸಂಘಟನೆಯ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನರೆಡ್ಡಿ ಅಮ್ಮಾಪೂರ ಅವರು ಆದೇಶ ಹೊರಡಿಸಿದ್ದಾರೆ.



ಕೂಡಲೇ ತಮಗೆ ನೀಡಿರುವ ಜವಾಬ್ದಾರಿಯನ್ನು ವಹಿಸಿಕೊಂಡು ಸಂಘಟನೆಯ ಸಕ್ರೀಯ ಕಾರ್ಯದಲ್ಲಿ ತೊಡಗಿಕೊಂಡು ವಿರಶೈವ ಲಿಂಗಾಯತ ಸಮಾಜವನ್ನು ಒಗ್ಗೂಡಿಸಿ ಸಂಘಟಿಸಿ ಸದಸ್ಯರನ್ನಾಗಿ ಮಾಡಿ ಸಂಘಟನೆಯ ಭಲವರ್ದನೆ ಮುಂದಾಗಬೇಕೆಂದು ನೀಡಿದ ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

## ಕೊಟ್ರಶೆಟ್ಟಿ ಫೌಂಡೇಶನ್ ವತಿಯಿಂದ ಅನ್ನದಾಸೋಹ



**ರಬಕವಿ :** ಇಲ್ಲಿಯ ಡಿ.ಕೆ ಕೊಟ್ರಶೆಟ್ಟಿ ಫೌಂಡೇಶನ್ ವತಿಯಿಂದ ಅಮಾವಾಸ್ಯೆಯ ನಿಮಿತ್ಯ ಮಾರ್ಚ್ ಹತ್ತರಂದು ಶ್ರೀ ದಾನಮ್ಮದೇವಿ ದೇವಸ್ಥಾನದಲ್ಲಿ ಅನ್ನಪ್ರಸಾದ ಸೇವೆಯನ್ನು ಹಮ್ಮಿಕೊಳ್ಳಲಾಗಿತ್ತು.

ಯುಗಾದಿ ಅಮಾವಾಸ್ಯೆಯಂದು ಪ್ರಾರಂಭವಾದ ಅನ್ನಪ್ರಸಾದ ಸೇವೆ ಕಳೆದ ಒಂದು ವರ್ಷದಿಂದ ಪ್ರತಿ ಅಮವಾಸ್ಯೆಯಂದು ನಿರಂತರವಾಗಿ ನಡೆಯುತ್ತಾ ಬಂದಿರುವುದು ಸಂತಸದ ಸಂಗತಿಯಾಗಿದೆ. ಇನ್ನು ಮುಂದಿನ ಐದು ವರ್ಷಗಳವರೆಗೆ ನಿರಂತರವಾಗಿ ಪ್ರತಿ ಅಮವಾಸ್ಯೆಯಂದು ಅನ್ನಪ್ರಸಾದ ಸೇವೆಯನ್ನು ಮುಂದುವರಿಸಲಾಗುವುದು ಎಂದು ಫೌಂಡೇಶನ್ ಅಧ್ಯಕ್ಷರಾದ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಅವರು ಹೇಳಿದರು. ಅನ್ನಪ್ರಸಾದ ಸೇವೆಗೆ ಸಹಾಯ ಸಹಕಾರವನ್ನು ನೀಡಿದ ಶ್ರೀ ದಾನಮ್ಮ ದೇವಿ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರಾದ ಶಿವಜಾತ ಉಮದಿ ಅವರನ್ನು, 'ಕಾವ್ಯ ಕೌಸ್ತುಭ' ಪ್ರಶಸ್ತಿಗೆ ಭಾಜನರಾದ ಸಿದ್ಧರಾಜ ಪೂಜಾರಿ ಅವರನ್ನು ಮತ್ತು ನಿರಂತರವಾಗಿ ಅಡುಗೆ ತಯಾರಿಸುವ ಬಾಲಚಂದ್ರ ಅಂಬಿಯವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಸರ್ವ ದಾನಗಳಲ್ಲಿಯೂ ಶ್ರೇಷ್ಠವಾದ ದಾನ ಅನ್ನದಾನ. ಸಕಲ ಜೀವರಾಶಿಗಳಿಗೆ ಆಧಾರವಾಗಿದೆ.

'ಅನ್ನಪೂರ್ಣೇ ಸದಾಪೂರ್ಣೆ ಶಂಕರ ಪ್ರಾಣವಲ್ಲಭೆ ಜ್ಞಾನ ಸಿದ್ದಾರ್ಥಂ ಭಿಕ್ಷಾಂದೇಹಿಚ ಪಾರ್ವತಿ' ಎಂಬ ಶಂಕರಾಚಾರ್ಯರ ಮಾತಿನಂತೆ ಅನ್ನದಾನ ಮಾಡುವುದರಿಂದ ಪುಣ್ಯ ಲಭಿಸುವುದಾಗಿ ಸನ್ಮಾನಿತರಾದ ಸಾಹಿತಿ ಸಿದ್ದರಾಜ ಪೂಜಾರಿಯವರು ನುಡಿದರು.

ಇಹಲೋಕ ಪರಲೋಕಗಳಲ್ಲಿ ಶಾಂತಿ ಸಮೃದ್ಧಿಯು ಆಯುಷ್ಯ ಆರೋಗ್ಯ, ಅನ್ನದಾನದಿಂದ ವೃದ್ಧಿಯಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಪ್ರೊ. ಎಂ. ಎಸ್. ಬದಾಮಿ, ಶಿವಾನಂದ ಮುತ್ತೂರ, ಡಾ. ಜಿ.ಎಚ್. ಚಿತ್ತರಗಿ ಮೊದಲಾದವರು ಉಪಸ್ಥಿತರಿದ್ದರು.

## ಭಕ್ತಿ ಭಾವದಿಂದ ಮಹಾ ಶಿವರಾತ್ರಿ ಆಚರಣೆ

**ತಾಳಿಕೋಟೆ :** ಮಹಾ ಶಿವರಾತ್ರಿಯ ನಿಮಿತ್ಯವಾಗಿ ಶುಕ್ರವಾರರಂದು ಪಟ್ಟಣದ ಜನರು ಭಕ್ತಿ ಭಾವದೊಂದಿಗೆ ಉಪವಾಸ ವೃತವನ್ನು ಆಚರಿಸಿ ದೇವಸ್ಥಾನಗಳಿಗೆ ತೆರಳಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು.

ಬೆಳಿಗ್ಗೆಯಿಂದಲೇ ಪಟ್ಟಣದ ದೇವಸ್ಥಾನಗಳಿಗೆ ಭಕ್ತಾಧಿಗಳು ಆಗಮಿಸುತ್ತಿದ್ದಲ್ಲದೇ ಕಾಯಿ, ಕರ್ಪೂರ, ಎಡೆ, ಲೋಭಾನ, ನೈವೇಧ್ಯಗಳನ್ನು ನೀಡುತ್ತಿರುವದು ಕಂಡು ಬಂದಿತು. ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠ, ಪುರಾತನ ದೇವಸ್ಥಾನವಾದ ಶ್ರೀ ಸಿದ್ದಲಿಂಗೇಶ್ವರ ದೇವಸ್ಥಾನ, ರಾಜವಾಡೆಯ ಶ್ರೀ ಮಹಾದೇವರ ದೇವಸ್ಥಾನ, ಶ್ರೀ ಹನುಮಾನ ಮಂದಿರ, ಶ್ರೀ ಅಂಬಾಭವಾನಿ ಮಂದಿರ, ಶ್ರೀ ಶಿವಭವಾನಿ ಮಂದಿರ ಒಳಗೊಂಡಂತೆ ಅನೇಕ ದೇವಸ್ಥಾನಗಳಿಗೆ ಭಕ್ತರ ದಂಡು ಹರಿದುಬರುತ್ತಿರುವದು ಸಾಮಾನ್ಯವಾಗಿತ್ತು.

ಶ್ರೀ ಖಾಸ್ಗತೇಶ್ವರ ಮಠದಲ್ಲಿ ಮಠಕ್ಕೆ ಬರುವ ಭಕ್ತಾಧಿಗಳಿಗೆ ಬಾಳೆ ಹಣ್ಣು, ದ್ರಾಕ್ಷೀ, ಕರ್ಝೂರಿಯನ್ನು ನೀಡುವದರೊಂದಿಗೆ ಉಪವಾಸ ವೃತಬಿಡುವದಕ್ಕೆ ವ್ಯವಸ್ಥೆ ಮಾಡಲಾಗಿತ್ತು ಅದರಂತೆ ಶ್ರೀ ಸಿದ್ದಲಿಂಗೇಶ್ವರ ದೇವಸ್ಥಾನದಲ್ಲಿಯೂ ಕೂಡಾ ಕರ್ಝೂರಿ, ಗೆಣಸು, ಇನ್ನಿತರ ಪ್ರಸಾದ ವಿತರಣೆ ಕಾರ್ಯ ನಡೆಯಿತು. ಸಾಯಂಕಾಲ 7 ಗಂಟೆ-ಗೆ ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠ ಮತ್ತು ಶ್ರೀ ಸಿದ್ದಲಿಂಗೇಶ್ವರ ದೇವಸ್ಥಾನದಲ್ಲಿ ಘೋಷವಾದ್ಯಗಳು ಮೊಳಗಿದವಲ್ಲದೇ ಅಖಂಡ ರಾತ್ರಿ ಶಿವಭಜನೆ ಜರುಗಿತು.

ಮಹಾ ಶಿವರಾತ್ರಿಯ ನಿಮಿತ್ಯ ಶ್ರೀ ಖಾಸ್ಗತರ ಹಾಗೂ ಶ್ರೀ ವಿರಕ್ತಶ್ರೀಗಳ ಕತೃಗದ್ದುಗೆಗೆ ವೇ.ವಿಶ್ವನಾಥ ವಿರಕ್ತಮಠ ಅವರು ಮಹಾಪೂಜೆ ಸಲ್ಲಿಸಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State